23.	ಸೋಲಾರ್ ಪ್ಯಾಕ್ ಸಿಸ್ಟಮ್‌ಗಳ ಖರೀದಿ/ರಿಪೇರಿ/ಎ.ಎಂ.ಸಿ ಬಗ್ಗೆ.	1,06,95,477	–
24.	ವಿವಿಧ ಮಾದರಿಯ ಸರಹದ್ದು ನಕ್ಷೆಗಳನ್ನು ಖರೀದಿಸಿರುವ ಬಗ್ಗೆ.	58,10,832	–
25.	ಪೊಲೀಸ್ ಅಧೀಕ್ಷಕರು, ಗದಗ ಜಿಲ್ಲೆ ರವರ ವಸತಿ ಗೃಹಕ್ಕೆ ಸಾಮಾನ್ಯ ವೆಚ್ಚದಡಿಯಲ್ಲಿ ಸಾಮಾಗ್ರಿಗಳ ರಿಪೇರಿ /ಖರೀದಿ ಮಾಡಿರುವ ಬಗ್ಗೆ.	–	2,75,927
26.	ಹೆಚ್ಚುವರಿಯಾಗಿ ಪಾವತಿಸಲಾಗಿರುವ ಸಿಯುಜಿ ದೂರವಾಣಿ ಕರೆಗಳ ಮೊತ್ತ ವಸೂಲಾತಿ ಬಗ್ಗೆ.	–	10,433
27.	ಕಷ್ಟ ಪರಿಹಾರ ಭತ್ಯೆಯನ್ನು ಹೆಚ್ಚುವರಿಯಾಗಿ ನೀಡಿರುವ ಬಗ್ಗೆ.	–	88,000
28.	ಹಬ್ಬದ ಮುಂಗಡ ಹಣ ಪಾವತಿಸಲು ಬಾಕಿ ಇರುವ ಬಗ್ಗೆ.	–	3,500
29.	ವಿಶೇಷ ಭತ್ಯೆಗಳನ್ನು ನೀಡುತ್ತಿರುವ ಬಗ್ಗೆ.	–	41,000 (+ಲೆಕ್ಕಾಚಾರ)
30.	ಶ್ರೀ ಆರ್.ಹೆಚ್.ಜುಂಗೆಣ್ಣವರ್, ಎಪಿಸಿ–07 ರವರಿಗೆ ಎ.ಎನ್.ಎಫ್ ಕರ್ತವ್ಯದಲ್ಲಿದ್ದ ಅವಧಿಯಲ್ಲಿ ಒಂದಕ್ಕಿಂತ ಹೆಚ್ಚಿನ ವಿಶೇಷ ಭತ್ಯೆಗಳನ್ನು ನೀಡಿರುವ ಬಗ್ಗೆ.		17,000
31.	ಪೊಲೀಸ್ ಅಧೀಕ್ಷಕರ ವಸತಿ ಗೃಹದ ವಿದ್ಯುತ್‌ಚ್ಛಕ್ತಿ ಬಿಲ್ಲಿನ ಮೊತ್ತವನ್ನು ಸರ್ಕಾರದ ಲೆಕ್ಕ ಶೀರ್ಷಿಕೆಯಿಂದ ಭರಿಸಿರುವ ಬಗ್ಗೆ.	–	47,750
32.	ಮಾಜಿ ಸೈನಿಕ ಕೋಟಾದಡಿಯಲ್ಲಿ ನೇಮಕಾತಿ ಹೊಂದಿರುವ ಪೊಲೀಸ್ ಸಿಬ್ಬಂದಿರವರುಗಳ ವೇತನವನ್ನು ಕೆ.ಸಿ.ಎಸ್ ನಿಯಮ 41–ಸಿ ಪ್ರಕಾರ ನಿಗಧಿಪಡಿಸಿರುವ ಬಗ್ಗೆ.	–	–
33.	ಡಿ.ಎಸ್.ಪಿ, ಸಿ.ಪಿ.ಐ ಕಛೇರಿ ಮತ್ತು ಪೊಲೀಸ್ ಠಾಣೆಗಳಲ್ಲಿ ಸ್ಥಳ ದಂಡ / ಕೋಟ್ಪಾ ಹಾಗೂ ಇನ್ನಿತರೆ ಮೂಲಗಳಿಂದ ರಾಜಸ್ವ ಸಂಗ್ರಹಿಸಿದ ಬಾಬ್ತಿನ ಬಗ್ಗೆ.	–	–
34.	ವೈದ್ಯಕೀಯ ವೆಚ್ಚ ಮರುಪಾವತಿ ಬಿಲ್ಲುಗಳ ಬಗ್ಗೆ.	72,268	62,997
35.	ಮಾತೃತ್ವ ರಜೆ ಮತ್ತು ಶಿಶುಪಾಲನಾ ರಜೆಯ ಅವಧಿಯಲ್ಲಿ ಕಷ್ಟ ಪರಿಹಾರ ಭತ್ಯೆ ನೀಡಿರುವ ಬಗ್ಗೆ.	–	4,75,000
36.	ಸೇವಾ ಪುಸ್ತಕಗಳ ಪರಿಶೀಲನೆ ಬಗ್ಗೆ.	–	–
37.	ಇಂಡಿಯನ್ ಆಯಿಲ್ ಕಾರ್ಪೋರೇಷನ್ ರವರು ನೀಡುವ ಕಮೀಷನ್ ಅಥವಾ ಇನ್ಸೆಂಟಿವ್ ಹಣದ ಕುರಿತು.	–	–
38.	ಎಸ್.ಆರ್.ಸಿ ನಿಗದಿಪಡಿಸುವ ಬಗ್ಗೆ.	–	–
39.	ವಾಹನಗಳನ್ನು ನಿರುಪಯುಕ್ತಗೊಳಿಸಿ ಮೌಲ್ಯಮಾಪನ ವರದಿ ನೀಡಿರುವ ಬಗ್ಗೆ.	4,40,000	

	ನಗಳ ಲಾಗ್ ಪುಸ್ತಕಗಳನ್ನು ಪೊಲೀಸ್ ಐ.ಟಿ.ಯಲ್ಲಿ ಮೂದಿಸದೇ ಇರುವ ಬಗ್ಗೆ.	–	–
	ಪತಿ– ಪತ್ನಿಯರಿಬ್ಬರು ಸರ್ಕಾರಿ ನೌಕರಿಯಲ್ಲಿರುವ ಪ್ರಕರಣಗಳಲ್ಲಿ ಮನೆ ಬಾಡಿಗೆ ಭತ್ಯೆಯನ್ನು ಕಟಾಯಿಸುವ ಬಗ್ಗೆ.	–	–
42.	ಹಳೆಯ ದಿನಪತ್ರಿಕೆಗಳನ್ನು ವಿಲೇವಾರಿ ಮಾಡಿರುವ ಬಗ್ಗೆ.	–	–
43.	ಬಸ್ ವಾರೆಂಟ್ ಪುಸ್ತಕಗಳ ಬಗ್ಗೆ.	–	–
44.	ರೈಲ್ವೇ ವಾರೆಂಟ್ ಪುಸ್ತಕಗಳ ಬಗ್ಗೆ.	–	–
45.	ಐ.ಎಂ.ವಿ. ಪುಸ್ತಕಗಳ ಬಗ್ಗೆ.	–	–
46.	ಕೋರ್ಟ್ ನೋಟೀಸ್ ಪುಸ್ತಕದ ದಾಸ್ತಾನಿನ ಬಗ್ಗೆ.	–	–
47.	ಘಟಕದ ಸ್ಥಿರಾಸ್ತಿಗಳ/ಕಟ್ಟಡಗಳ ವಿವರಗಳನ್ನು ಲೆಕ್ಕಪರಿಶೋಧನೆಗೆ ಒದಗಿಸದೇ ಇರುವ ಬಗ್ಗೆ.	–	–
48.	ಸಂಗ್ರಹ ಮತ್ತು ದಾಸ್ತಾನುಗಳ ಭೌತಿಕ ಪರಿಶೀಲನೆಯನ್ನು ಕೈಗೊಂಡ ಬಗ್ಗೆ ದಾಖಲೆಗಳನ್ನು ಒದಗಿಸದೇ ಇರುವ ಬಗ್ಗೆ.	–	–
	ಒಟ್ಟು ಮೊತ್ತ ರೂ.	**3,11,31,274.77/–**	**10,46,607/–**

(ಪಿಸ್.ದೇವಣ್ಣ) 7/12/23
ಜಂಟಿ ನಿಯಂತ್ರಕರು (ಹಣಕಾಸು)
ಮಹಾನಿದೇ೯ಶಕರು ಮತ್ತು ಪೊಲೀಸ್
ಮಹಾನಿರೀಕ್ಷಕರು ರವರ ಪರವಾಗಿ 7/12/23

134

ಜೆರಾಕ್ಸ್ ಮೆಷಿನ್‌ಗಳ ವಾರ್ಷಿಕ ನಿರ್ವಹಣೆಗಾಗಿ ಇಷ್ಟೊಂದು ಹೆಚ್ಚಿನ ಮೊತ್ತಕ್ಕೆ ಎ.ಎಂ.ಸಿ ವಹಿಸುವಾಗ ಸರ್ಕಾರದ ಆದೇಶ ಸಂಖ್ಯೆ: ಎಫ್‌ಡಿ 03 ಟಿಎಫ್‌ಪಿ 2018, ದಿನಾಂಕ: 14.05.2018 ಸಾದಿಲ್ವಾರು ವೆಚ್ಚದ ಕೈಪಿಡಿ 1958 ನಿಯಮ 55(49–ಎ)ರ ಪ್ರಕಾರ ಘಟಕದಲ್ಲಿ ರೂ.1.00 ಲಕ್ಷಕ್ಕೂ ಮೇ ಖರೀದಿ / ಎಎಂಸಿ ವ್ಯವಹಾರಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಟೆಂಡರ್ ಮಾಡಬೇಕಾಗಿರುತ್ತ ಆದರೆ, ಸದರಿ ನಿಯಮ / ಆದೇಶಗಳಿಗೆ ವಿರುದ್ದವಾಗಿ ಜೆರಾಕ್ಸ್ ಮೆಷಿನ್‌ಗಳು ಸುಸ್ಥಿತಿಯಲ್ಲಿರುವಾಗಲೇ ಅವುಗಳ ವಾರ್ಷಿಕ ನಿರ್ವಹಣೆಗಾಗಿ **ರೂ. 16,67,897/–** ಗಳಷ್ಟು ಬೃಹತ್ ಮೊತ್ತವನ್ನು ಟೆಂಡರ್ ಪ್ರಕ್ರಿಯೆಗಳನ್ನು ಉಲ್ಲಂಘಿಸಿ ನೀಡಿರುವುದು ಕೆ.ಟಿ.ಪಿ.ಪಿ. ನಿಯಮಕ್ಕೆ ವಿರುದ್ದವಾಗಿರುತ್ತದೆ.

ಆದ್ದರಿಂದ, ಮೇಲ್ಕಂಡ ಎಎಂಸಿ ಮೊತ್ತಕ್ಕೆ ಎಷ್ಟು ಜೆರಾಕ್ಸ್ ಮೆಷಿನ್‌ಗಳನ್ನು ನಿರ್ವಹಣೆ / ದುರಸ್ಥಿ ಮಾಡಿರುತ್ತಾರೆ ? ಎ.ಎಂ.ಸಿ. ಪಡೆದ ವರ್ಷದಲ್ಲಿ ಜೆರಾಕ್ಸ್ ಮೆಷಿನ್ ನಿರ್ವಹಣೆ ಕುರಿತು ದಾಖಿಲಾದ ದೂರುಗಳ ನೋಂದಣಿ ಹಾಗೂ ಎ.ಎಂ.ಸಿ. ಪಡೆದ ಸಂಸ್ಥೆಯವರು ನಿರ್ವಹಿಸಿರುವ ದೂರು ಅರ್ಜಿಗಳ ನೋಂದಣಿ ವಹಿಯ ದೃಢೀಕೃತ ಪ್ರತಿಗಳನ್ನು ಸಲ್ಲಿಸುವುದು ಮತ್ತು ಸರ್ಕಾರದ ಆದೇಶ ಸಂಖ್ಯೆ: ಎಫ್‌ಡಿ 03 ಟಿಎಫ್‌ಪಿ 2018, ದಿನಾಂಕ: 14.05.2018 ಮತ್ತು ಕೆ.ಟಿ.ಪಿ.ಪಿ. ಕಾಯ್ದೆ 1999 ಮತ್ತು ನಿಯಮ 2000 ಅನ್ನು ಉಲ್ಲಂಘಿಸಿರುವ ಬಗ್ಗೆ ವಿವರಣೆ ಹಾಗೂ ಮೇಲ್ಕಂಡ ಎಲ್ಲಾ ದಾಖಿಲಾತಿಗಳ ದೃಢೀಕೃತ ಪ್ರತಿಗಳೊಂದಿಗೆ ಪಾಲನಾ ವರದಿಯನ್ನು ಸಲ್ಲಿಸುವುದು. **ಅಲ್ಲಿಯವರೆಗೂ ರೂ. 16,67,897/– ಗಳನ್ನು ಆಕ್ಷೇಪಣೆಯಲ್ಲಿರಿಸಲಾಗಿದೆ.**

ಕಂಡಿಕೆ : 23– ಸೋಲಾರ್ ಪ್ಯಾಕ್ ಸಿಸ್ಟಮ್‌ಗಳ ಖರೀದಿ/ರಿಪೇರಿ/ಎ.ಎಂ.ಸಿ ಬಗ್ಗೆ:–

ಪೊಲೀಸ್ ಅಧೀಕ್ಷಕರು, ಗದಗ ಜಿಲ್ಲೆ ರವರ ಕಛೇರಿಯ ಸಂಗ್ರಹ ಶಾಖೆಯ ಕಡತಗಳು ಮತ್ತು ಬಿಲ್ಲುಗಳನ್ನು ಪರಿಶೀಲಿಸಲಾಗಿ ಜಿಲ್ಲೆಯ ವಿವಿಧ ಉಪವಿಭಾಗ, ವೃತ್ತ ಕಛೇರಿ ಮತ್ತು ಪೊಲೀಸ್ ಠಾಣೆಗಳಿಗೆ ಸೋಲಾರ್ ಪ್ಯಾಕ್ ಸಿಸ್ಟಮ್‌ಗಳನ್ನು ಪ್ರಶಾಂತ್ ಸೋಲಾರ್ & ಯು.ಪಿ.ಎಸ್ ಸಿಸ್ಟಮ್, ಕೋಲಾರ ರವರಿಂದ ಖರೀದಿಸಲಾಗಿರುತ್ತದೆ ಹಾಗೂ ಅವುಗಳನ್ನು ಕಾಲಕಾಲಕ್ಕೆ ರಿಪೇರಿ ಮಾಡಿಸಿದ್ದು, ಪ್ರತಿ ವರ್ಷ ಎಎಂಸಿ ನೀಡಲಾಗಿರುತ್ತದೆ. ವಿವರಗಳು ಕೆಳಕಂಡಂತಿರುತ್ತದೆ.

ಕ್ರ ಸಂ	ಡಿಸಿ ಬಿಲ್ ಸಂಖ್ಯೆ	ವರ್ಷ	ವಿವರ	ಒಟ್ಟು ಮೊತ್ತ ರೂ.
1	No: 35, 38, 40, 42, 43, 45, 47, 49, 50, 52, 57	2019–20	ಖರೀದಿ	40,98,390
2	No: 36,49,51,87,94	2020–21	ರಿಪೇರಿ & ಎಎಂಸಿ	42,17,289
3	28, 30, 33, 34, 38	2021–22	ಎಎಂಸಿ	23,79,798
			ಒಟ್ಟು ಮೊತ್ತ ರೂ.	**1,06,95,477/–**

ಮೇಲ್ಕಂಡ ಸೋಲಾರ್ ಪ್ಯಾಕ್ ಸಿಸ್ಟಮ್‌ಗಳನ್ನು GEM Portal ನಲ್ಲಿ ಖರೀದಿ ಮಾಡದೇ ಇರುವ ಬಗ್ಗೆ ವಿವರಣೆಯನ್ನು ಹಾಗೂ ಸದರಿ ಬಿಲ್ಲಿನಲ್ಲಿ ನಿಯಮಾವಳಿಗಳ ಪ್ರಕಾರ ಆದಾಯ ತೆರಿಗೆ ಮತ್ತು ಜಿ.ಎಸ್.ಟಿ ಬಾಬ್ತನ್ನು ಕಟಾಯಿಸಿರುವ ಬಗ್ಗೆ ಹಾಗೂ ಸದರಿ ಸೋಲಾರ್ ಪ್ಯಾಕ್ ಸಿಸ್ಟಮ್‌ಗಳನ್ನು ದಾಸ್ತಾನಿನಲ್ಲಿ ಲೆಕ್ಕಕ್ಕೆ ತೆಗೆದುಕೊಂಡಿರುವ ಬಗ್ಗೆ ದೃಢೀಕೃತ ದಾಖಿಲಾತಿಗಳೊಂದಿಗೆ ಪಾಲನಾ ವರದಿಯನ್ನು ಸಲ್ಲಿಸುವುದು ಹಾಗೂ ಸದರಿ ಎ.ಎಂ.ಸಿ ಮೊತ್ತಕ್ಕೆ

ಸೋಲಾರ್ ಪ್ಯಾಕ್‌ಗಳನ್ನು ನಿರ್ವಹಣೆ / ದುರಸ್ತಿ ಮಾಡಿರುತ್ತಾರೆ ? ಎಷ್ಟು ಬಾರಿ/ದಿನಗಳ ಕಾಲ ಪರಿಶೀಲನೆ ಮಾಡಿರುತ್ತಾರೆ? ಎ.ಎಂ.ಸಿ. ಪಡೆದ ವರ್ಷದಲ್ಲಿ ಸೋಲಾರ್ ಪ್ಯಾಕ್‌ಗಳ ನಿರ್ವಹಣೆ ಕುರಿತು ಎಷ್ಟು ದೂರುಗಳು ನೋಂದಣಿಯಾಗಿರುತ್ತದೆ? ಎಂಬ ಬಗ್ಗೆ ಹಾಗೂ ಎ.ಎಂ.ಸಿ. ಪಡೆದ ಸಂಸ್ಥೆಯವರು ನಿರ್ವಹಿಸಿರುವ ದೂರು ಅರ್ಜಿಗಳ ನೋಂದಣಿ ವಹಿಯ ದೃಢೀಕೃತ ಪ್ರತಿಗಳನ್ನು ಸಲ್ಲಿಸುವುದು. ಮೇಲ್ಕಂಡ ಎಲ್ಲಾ ದಾಖಲಾತಿಗಳ ದೃಢೀಕೃತ ಪ್ರತಿಗಳೊಂದಿಗೆ ಪಾಲನಾ ವರದಿಯನ್ನು ಸಲ್ಲಿಸುವುದು. <u>ಅಲ್ಲಿಯವರೆಗೂ ರೂ.1,06,95,477/- ಗಳನ್ನು ಆಕ್ಷೇಪಣೆಯಲ್ಲಿರಿಸಲಾಗಿದೆ.</u>

<u>ಕಂಡಿಕೆ: 24- ವಿವಿಧ ಮಾದರಿಯ ಸರಹದ್ದು ನಕ್ಷೆಗಳನ್ನು ಖರೀದಿಸಿರುವ ಬಗ್ಗೆ:-</u>

ಪೊಲೀಸ್ ಅಧೀಕ್ಷಕರು, ಗದಗ ಜಿಲ್ಲೆ ರವರ ಕಛೇರಿಯ ಕಛೇರಿಯ ಸಂಗ್ರಹ ಶಾಖೆಯ ಡಿ.ಸಿ ಬಿಲ್ಲುಗಳನ್ನು ಪರಿಶೀಲಿಸಲಾಗಿ, ಜಿಲ್ಲೆಯ ವ್ಯಾಪ್ತಿಯ ಪೊಲೀಸ್ ಕಛೇರಿ/ಠಾಣೆಗಳ ಉಪಯೋಗಕ್ಕಾಗಿ ಅವಶ್ಯವಿರುವ ಕಂಪ್ಯೂಟರೈಸಡ್ ನಕ್ಷೆಗಳನ್ನು <u>ರೂ 58,10,832/-</u> ಗಳ ವೆಚ್ಚದಲ್ಲಿ 2019-21ನೇ ಸಾಲಿನಲ್ಲಿ ಮೆ//ವಾಣಿ ಆರ್ಟ್ಸ್, ಬೆಂಗಳೂರು ರವರಿಂದ ಖರೀದಿಸಲಾಗಿರುತ್ತದೆ. ವಿವರಗಳು ಈ ಕೆಳಕಂಡಂತಿರುತ್ತವೆ.

ಕ್ರ ಸಂ	ಡಿಸಿ ಬಿಲ್ ಸಂಖ್ಯೆ	ವರ್ಷ	ಒಟ್ಟು ಮೊತ್ತ ರೂ.
1	No:54,55,56,60,61,62,74,75,78	2019-20	47,91,312
2	No:26	2020-21	10,19,520
		ಒಟ್ಟು ಮೊತ್ತ ರೂ.	**58,10,832/-**

ಮೇಲೆ ವಿವರಿಸಲಾದ ಮಂಜೂರಾತಿ ಆದೇಶಗಳಿನ್ವಯ ನಕ್ಷೆಗಳನ್ನು ಟೆಂಡರ್ ಮುಖಾಂತರ ಖರೀದಿಸದೇ ಸ್ಪರ್ಧಾತ್ಮಕ ದರಪಟ್ಟಿ ಮುಖಾಂತರ ಖರೀದಿಸಲಾಗಿದ್ದು, ಕೆ.ಟಿ.ಪಿ.ಪಿ ನಿಯಮ 1999-2000 ರನ್ವಯ ಟೆಂಡರ್ ಪ್ರಕ್ರಿಯೆ ತಪ್ಪಿಸಲು ಉದ್ದೇಶಪೂರ್ವಕವಾಗಿ ಒಂದು ಲಕ್ಷದೊಳಗೆ ದರಪಟ್ಟಿಗಳನ್ನು ವಿಭಜಿಸಿ ಒಂದೇ ಸಂಸ್ಥೆಯಿಂದ ನಕ್ಷೆ ಖರೀದಿಸಿರುವುದು ಕಂಡು ಬಂದಿರುತ್ತದೆ.

ಈ ವ್ಯವಹಾರದಲ್ಲಿ ಆದಂತಹ ಲೋಪದೋಷಗಳು ಹಾಗೂ ನಿಯಮಗಳ ಉಲ್ಲಂಘನೆ ಕುರಿತು ಕೆಳಗಿನಂತೆ ವಿವರಿಸಲಾಗಿದೆ.

1. ಮೇಲ್ಕಂಡ ಪಟ್ಟಿಯಲ್ಲಿರುವ ಮಂಜೂರಾತಿ ಆದೇಶಗಳಲ್ಲಿ ವಲಯ ವ್ಯಾಪ್ತಿಯಲ್ಲಿ ರಾಷ್ಟ್ರೀಯ/ರಾಜ್ಯ ಹೆದ್ದಾರಿಗಳು, ಜಿಲ್ಲಾ ಮುಖ್ಯ ರಸ್ತೆ, ನದಿಗಳು, ರೈಲು ಹಳಿ ಜೊತೆಗೆ ಜಿಲ್ಲಾ/ಉಪವಿಭಾಗ/ವೃತ್ತ ಹಾಗೂ ಪೊಲೀಸ್ ಠಾಣೆ, ಎಸ್.ಪಿ/ಡಿಎಸ್‌ಪಿ/ವೃತ್ತ/ಪೊಲೀಸ್ ಠಾಣೆ/ಹೊರ ಠಾಣೆ/ತಾಲ್ಲೂಕು/ಗ್ರಾಮ ಪಂಚಾಯಿತಿ/ಹೋಬಳಿಗಳ ಹೆಸರು ಮತ್ತು ಕೇಂದ್ರಸ್ಥಾನದ ಮಾಹಿತಿಯನ್ನೊಳಗೊಂಡ ನಕ್ಷೆಗಳನ್ನು ಖರೀದಿಸಿರುವುದಾಗಿ ತಿಳಿಸಲಾಗಿದೆ. ಆದರೆ ನಕ್ಷೆಗಳ ತಯಾರಿಕೆಯ ವಿಷಯದಲ್ಲಿ ಒಂದು ಕ್ರಿಯಾ ಯೋಜನೆಯನ್ನು ಸಿದ್ದಪಡಿಸಿ, ಸದರಿ ಕ್ರಿಯಾಯೋಜನೆಗೆ ಇಲಾಖಾ ಮುಖ್ಯಸ್ಥರಿಂದ (ಡಿ.ಜಿ.ಮತ್ತು ಐ.ಜಿ.ಪಿ) ಅನುಮೋದನೆಯನ್ನು ಪಡೆದುಕೊಂಡಿರುವುದಿಲ್ಲ.

"RPAD"

ಕರ್ನಾಟಕ ಸರ್ಕಾರ
(ಪೊಲೀಸ್ ಇಲಾಖೆ)

ಸಂಖ್ಯೆ: ಲೆಪದ–12/37/2024–25
ಬೆಂಕಿ: 52 ಬೆಂಗಳೂರು,

ಡೈರೆಕ್ಟರ್ ಜನರಲ್ ಮತ್ತು ಇನ್ಸ್‌ಪೆಕ್ಟರ್ ಜನರಲ್ ಆಫ್ ಪೊಲೀಸ್ ರವರ ಕಛೇರಿ,
ಕರ್ನಾಟಕ ರಾಜ್ಯ, ಬೆಂಗಳೂರು.
ದಿನಾಂಕ: 17/09/2024.

ಗೆ,
ಪೊಲೀಸ್ ಅಧೀಕ್ಷಕರು,
ಮೈಸೂರು ಜಿಲ್ಲೆ,
ಮೈಸೂರು.

ಮಾನ್ಯರೆ,

ವಿಷಯ:– ಪೊಲೀಸ್ ಅಧೀಕ್ಷಕರು, ಮೈಸೂರು ಜಿಲ್ಲೆ ರವರ ಕಛೇರಿಯ ದಿನಾಂಕ: 01/04/2022 ರಿಂದ 31/03/2023 ರವರೆಗಿನ ಅವಧಿಯ ಆರ್ಥಿಕ ವರ್ಷದ ಲೆಕ್ಕಪರಿಶೋಧನಾ ವರದಿಯ ಬಗ್ಗೆ.

ಉಲ್ಲೇಖ:– ಈ ಕಛೇರಿಯ ಜ್ಞಾಪನ ಪತ್ರ ಸಂಖ್ಯೆ: ಲೆಪದ–1/01/23–24, ದಿನಾಂಕ: 09/02/2024.

* * * * * *

ಪ್ರಧಾನ ಕಛೇರಿಯ ಲೆಕ್ಕಪರಿಶೋಧನಾ ತಂಡದವರು ತಮ್ಮ ಕಛೇರಿಯ ದಿನಾಂಕ: 01/04/2022 ರಿಂದ 31/03/2023 ರವರೆಗಿನ *(01 ಆರ್ಥಿಕ ವರ್ಷ)* ಅವಧಿಯ ಲೆಕ್ಕಪರಿಶೋಧನೆಯನ್ನು ಕೈಗೊಂಡಿದ್ದು, ತತ್ಸಂಬಂಧ ಸದರಿ ಲೆಕ್ಕಪರಿಶೋಧನಾ ವರದಿಯನ್ನು ಇದರೊಂದಿಗೆ ಲಗತ್ತಿಸಿ ಕಳುಹಿಸಿದೆ.

ಸದರಿ ವರದಿಯಲ್ಲಿ ತಿಳಿಸಿರುವಂತೆ ಸೂಕ್ತ ಕ್ರಮ ಕೈಗೊಂಡು, ಪಾಲನಾ ವರದಿಯನ್ನು ದೃಢೀಕೃತ ದಾಖಲಾತಿಗಳೊಂದಿಗೆ ***30 ದಿವಸಗಳೊಳಗಾಗಿ*** ಈ ಕಛೇರಿಗೆ ಕಳುಹಿಸಿಕೊಡಲು ಕೋರಿದೆ.

ರವಾನಿಸಲಾಗಿದೆ
17 SEP 2024
ಸಹಿ:.....

ತಮ್ಮ ವಿಶ್ವಾಸಿ,

17/9/24
(ಎಸ್.ರೇವಣ್ಣ)
ಜಂಟಿ ನಿಯಂತ್ರಕರು (ಹಣಕಾಸು)
ಮಹಾನಿರ್ದೇಶಕರು ಮತ್ತು ಪೊಲೀಸ್ ಮಹಾನಿರೀಕ್ಷಕರು ರವರ ಪರವಾಗಿ
17/9/24

ಪ್ರತಿಯನ್ನು: ಪೊಲೀಸ್ ಮಹಾನಿರೀಕ್ಷಕರು, ದಕ್ಷಿಣ ವಲಯ, ಮೈಸೂರು ರವರಿಗೆ ವರದಿಯ ಪ್ರತಿಯೊಂದಿಗೆ ಮಾಹಿತಿ ಮತ್ತು ಮುಂದಿನ ಕ್ರಮಕ್ಕಾಗಿ ಕಳುಹಿಸಲಾಗಿದೆ.

ಪೊಲೀಸ್ ಅಧೀಕ್ಷಕರು, ಮೈಸೂರು ಜಿಲ್ಲೆ ರವರ ಕಛೇರಿಯ ದಿನಾಂಕ: 01.04.2022 ರಿಂದ 31.03.2023 ರವರೆಗಿನ (01 ಆರ್ಥಿಕ ವರ್ಷ) ಅವಧಿಗೆ ಸಂಬಂಧಿಸಿದ ಲೆಕ್ಕಪರಿಶೋಧನಾ ವರದಿಯಲ್ಲಿ ಆಕ್ಷೇಪಣೆಯಲ್ಲಿಡಲಾದ ಮತ್ತು ವಸೂಲಿ ಮಾಡಿ ಸರ್ಕಾರಕ್ಕೆ ಜಮಾ ಮಾಡಬೇಕಾದ ಮೊತ್ತದ ವಿವರಣಾ ಪಟ್ಟಿ.

ಕಂಡಿಕೆ ಸಂಖ್ಯೆ	ವಿವರಗಳು	ಆಕ್ಷೇಪಣೆಯಲ್ಲಿಡಲಾದ ಮೊತ್ತ ರೂ.	ವಸೂಲಾತಿಗೆ ಸೂಚಿಸಲಾದ ಮೊತ್ತ ರೂ.
1.	ನಗದು ಪರಿಶೀಲನೆ ಬಗ್ಗೆ	47,053	–
2.	ಪದನಾಮದ ಖಾತೆಯ ಬಗ್ಗೆ	1,42,121	–
3.	ಕ್ಯಾಶ್ ಚೆಸ್ಟ್ ಮತ್ತು ಇಮ್ಮಡಿ ಬೀಗದ ಕೀ ಬಗ್ಗೆ	–	–
4.	ಜಿಲ್ಲಾ ಪೊಲೀಸ್ ಕಲ್ಯಾಣ ನಿಧಿಯ ನಗದು ಪುಸ್ತಕದ ಪರಿಶೀಲನೆಯ ಬಗ್ಗೆ	9,16,258	–
5.	ಜಿಲ್ಲಾ ಪೊಲೀಸ್ ಕಲ್ಯಾಣ ನಿಧಿಯ ಸ್ಥಿರ ಠೇವಣಿ ಹೂಡಿಕೆಗಳ ಬಗ್ಗೆ	20,00,000	–
6.	ಪೊಲೀಸ್ ಕಲ್ಯಾಣ ನಿಧಿಯಿಂದ ನೀಡಿರುವ ಬಾಬ್ತಿನ ಸಂಪೂರ್ಣ ವಿವರಗಳನ್ನು ಲೆಕ್ಕಪರಿಶೋಧನೆಗೆ ಒದಗಿಸದೇ ಇರುವ ಬಗ್ಗೆ	–	–
7.	ಸ್ಥಳೀಯ ಲೆಕ್ಕ ಪರಿಶೋಧನಾ ವರ್ತುಲರವರಿಂದ ಪೊಲೀಸ್ ಕಲ್ಯಾಣ ನಿಧಿಯ ಲೆಕ್ಕಪರಿಶೋಧನೆಯನ್ನು ಮಾಡಿಸುವ ಬಗ್ಗೆ	–	–
8.	ನಿವೃತ್ತ ಪೊಲೀಸ್ ಅಧಿಕಾರಿ/ಸಿಬ್ಬಂದಿಗಳ ಕ್ಷೇಮ ನಿಧಿ ಬಗ್ಗೆ	15,36,229	–
9.	ನಿವೃತ್ತ ಪೊಲೀಸ್ ಅಧಿಕಾರಿಗಳ ಕ್ಷೇಮ ನಿಧಿಯ ಸ್ಥಿರ ಠೇವಣಿ ಹೂಡಿಕೆಗಳ ಬಗ್ಗೆ	40,00,000	–
10.	ಪೊಲೀಸ್ ಕ್ರೀಡಾ ನಿಧಿಯ ಬಗ್ಗೆ	6,00,597	–
11.	ನಗದು ಘೋಷಣೆ ವಹಿಯನ್ನು ನಿರ್ವಹಿಸದೇ ಇರುವ ಬಗ್ಗೆ	–	–
12.	ಜಿಲ್ಲಾಧಿಕಾರಿಗಳು, ಮೈಸೂರು ಜಿಲ್ಲೆ ರವರು ಪಂಚಲಿಂಗ ದರ್ಶನ ಮಹೋತ್ಸವದ ಕಾರ್ಯಕ್ರಮದ ಪೊಲೀಸ್ ಬಂದೋಬಸ್ತ್‌ಗಾಗಿ ಅನುದಾನವನ್ನು ಬಿಡುಗಡೆ ಮಾಡಿರುವ ಬಗ್ಗೆ	22,67,474	–
13.	ಕೆ.ಟಿ.ಪಿ.ಪಿ ನಿಯಮಗಳನ್ನು ಉಲ್ಲಂಘಿಸಿ ಸಾಮಾಗ್ರಿಗಳನ್ನು ಖರೀದಿಸಿರುವ ಬಗ್ಗೆ	41,07,325	–
14.	ಜೆರಾಕ್ಸ್ ಮೆಷಿನ್‌ಗಳ ನಿರ್ವಹಣೆಗಾಗಿ ಎ.ಎಂ.ಸಿ ನೀಡಿರುವ ಬಗ್ಗೆ	7,86,352	–
15.	ವಿವಿಧ ಬಂದೋಬಸ್ತ್ ಕರ್ತವ್ಯಗಳಿಗಾಗಿ ಆಹಾರ ಭತ್ಯೆಯನ್ನು ಡ್ರಾ ಮಾಡಿರುವ ಬಗ್ಗೆ	55,86,426	–
16.	ಪೊಲೀಸ್ ಠಾಣೆ/ವೃತ್ತ ಕಛೇರಿ/ಉಪ ವಿಭಾಗ ಕಛೇರಿಗಳಿಗೆ ಲೇಖನ ಸಾಮಗ್ರಿ ಖರೀದಿ ಮತ್ತು ಸ್ವಚ್ಛತೆಗಾಗಿ ನೀಡಿರುವ ಬಾಬ್ತಿನ ಬಗ್ಗೆ	–	–

	ಎಸ್.ಪಿ, ಸಿ.ಪಿ.ಐ ಕಛೇರಿ ಮತ್ತು ಪೊಲೀಸ್ ಠಾಣೆಗಳಲ್ಲಿ ಸ್ಥಳ ದಂಡ / ಕೋರ್ಟ್ ಹಾಗೂ ಇನ್ನಿತರೆ ಮೂಲಗಳಿಂದ ರಾಜಸ್ವ ಸಂಗ್ರಹಿಸಿದ ಬಾಬ್ತಿನ ಬಗ್ಗೆ	–	–
18.	ಪೊಲೀಸ್ ಠಾಣೆ / ಕಛೇರಿಗಳ ಲೆಕ್ಕಪರಿಶೋಧನೆ ಬಗ್ಗೆ	–	–
19.	ನಂಜನಗೂಡು ಸಂಚಾರ ಪೊಲೀಸ್ ಠಾಣೆಯ ಲೆಕ್ಕಪರಿಶೋಧನೆ ಬಗ್ಗೆ	22,44,900	
20.	ಸಮಾಲೋಚಕರ ಮಾಸಿಕ ವೇತನದಲ್ಲಿ ಆದಾಯ ತೆರಿಗೆಯನ್ನು ಕಡಿತಗೊಳಿಸದೇ ಇರುವ ಬಗ್ಗೆ	–	35,000
21.	ಘಟಕದ ವಾಹನಗಳನ್ನು ಚಾಲನೆ ಮಾಡುವ ಪೊಲೀಸ್ ಸಿಬ್ಬಂದಿಯವರುಗಳಿಗೆ ವಾಹನ ಚಾಲನಾ ಭತ್ಯೆ ನೀಡಿರುವ ಬಗ್ಗೆ	–	5,21,100
22.	ಡಿ.ಸಿ. ಬಿಲ್ಲುಗಳಲ್ಲಿ ಜಿ.ಎಸ್.ಟಿ ಬಾಬ್ತನ್ನು ಕಡಿತಗೊಳಿಸದೆ ಇರುವ ಬಗ್ಗೆ	–	29,447
23.	ಅಮಾನತ್ತಿನ ಅವಧಿಯಲ್ಲಿ ಪೊಲೀಸ್ ಅಧಿಕಾರಿ ಮತ್ತು ಸಿಬ್ಬಂದಿಗಳಿಗೆ ಇತರೆ ಭತ್ಯೆಗಳನ್ನು ಮಂಜೂರಿಸಿರುವ ಬಗ್ಗೆ	–	32,776
24.	ಲಿಪಿಕ ಅಧಿಕಾರಿ/ಸಿಬ್ಬಂದಿಯವರುಗಳಿಗೆ ವಾರ್ಷಿಕ ಆರೋಗ್ಯ ತಪಾಸಣೆಗಾಗಿ ಮೊತ್ತವನ್ನು ಮಂಜೂರು ಮಾಡಿರುವ ಬಗ್ಗೆ	40,000	–
25.	ಮಾಜಿ ಸೈನಿಕ ಕೋಟಾದಡಿಯಲ್ಲಿ ನೇಮಕಾತಿ ಹೊಂದಿರುವ ಪೊಲೀಸ್ ಸಿಬ್ಬಂದಿರವರುಗಳ ವೇತನವನ್ನು ಕೆ.ಸಿ.ಎಸ್ ನಿಯಮ 41–ಸಿ ಪ್ರಕಾರ ನಿಗಧಿಪಡಿಸಿರುವ ಬಗ್ಗೆ	–	–
26.	ಸೇವಾ ಪುಸ್ತಕಗಳ ಪರಿಶೀಲನೆ ಬಗ್ಗೆ	–	–
27.	ಇಂಡಿಯನ್ ಆಯಿಲ್ ಕಾರ್ಪೋರೇಷನ್ ರವರು ನೀಡುವ ಕಮಿಷನ್ ಅಥವಾ ಇನ್ಸೆಂಟಿವ್ ಹಣದ ಬಗ್ಗೆ	–	–
28.	ಎಸ್.ಆರ್.ಸಿ ನಿಗದಿಪಡಿಸುವ ಬಗ್ಗೆ	–	–
29.	ನಿರುಪಯುಕ್ತಗೊಂಡ ವಾಹನಗಳನ್ನು ಬಹಿರಂಗ ಹರಾಜು ಮಾಡಲು ಬಾಕಿ ಇರುವ ಬಗ್ಗೆ	–	–
30.	ಮೋಟಾರು ವಾಹನ ವಿಭಾಗದ ಅನುಪಯುಕ್ತ ಸಾಮಗ್ರಿಗಳನ್ನು ವಿಲೇವಾರಿ ಮಾಡಲು ಬಾಕಿ ಇರುವ ಬಗ್ಗೆ	–	–
31.	ಹಳೆಯ ದಿನಪತ್ರಿಕೆಗಳನ್ನು ವಿಲೇವಾರಿ ಮಾಡುವ ಬಗ್ಗೆ	–	–
32.	ಬಸ್ ವಾರೆಂಟ್ ಪುಸ್ತಕಗಳ ಬಗ್ಗೆ	–	–
33.	ರೈಲ್ವೇ ವಾರೆಂಟ್ ಪುಸ್ತಕಗಳ ಬಗ್ಗೆ	–	–
34.	ಸಾಮಾನ್ಯ ರಸೀದಿ ಪುಸ್ತಕಗಳ ಬಗ್ಗೆ	–	–

35.	ಸಂಗ್ರಹ ಮತ್ತು ದಾಸ್ತಾನುಗಳ ಭೌತಿಕ ಪರಿಶೀಲನೆಯನ್ನು ಕೈಗೊಳ್ಳುವ ಬಗ್ಗೆ	–	–
36.	ಆಸ್ತಿ ಪಹಿ (Asset Register) ನಿರ್ವಹಿಸದಿರುವ ಬಗ್ಗೆ	–	–
37.	2022–23ರ ಅವಧಿಯ ಆರ್ಥಿಕ ವರ್ಷದಲ್ಲಿ ಬಿಡುಗಡೆಯಾಗಿರುವ ಅನುದಾನವನ್ನು ಬಳಕೆ ಮಾಡಿರುವ ಹಾಗೂ ಆದ್ಯರ್ಪಿಸಿರುವ ವಿವರಗಳ ಬಗ್ಗೆ	–	–
	ಒಟ್ಟು ಮೊತ್ತ ರೂ.	**2,42,74,735/–**	**6,18,323/–**

17/9/24

(ಎಸ್.ರೇವಣ್ಣ)
ಜಂಟಿ ನಿಯಂತ್ರಕರು (ಹಣಕಾಸು)
ಮಹಾನಿರ್ದೇಶಕರು ಮತ್ತು ಪೊಲೀಸ್
ಮಹಾನಿರೀಕ್ಷಕರು ಇವರ ಪರವಾಗಿ
17/9/24

ಕ್ರ ಸಂ.	ಮೊತ್ತ ಪಾವತಿಸಿರುವ ಸಂಸ್ಥೆಯ ಹೆಸರು ಮತ್ತು ವಿಳಾಸ	ಪಾವತಿಸಿರುವ ಮೊತ್ತ ರೂ.
1	ಮೆ// ಮಯೂರ ಇನ್ಫೋಟೆಕ್ ಪ್ರೈ.ಲಿ., ಬೆಂಗಳೂರು	1,74,346
2	ಮೆ// ಭೈರವೇಶ್ವರ ಏಜೆನ್ಸೀಸ್	1,61,011
3	ಮೆ// ಪುಷ್ಪಕ್ ಏಜೆನ್ಸೀಸ್, ಮೈಸೂರು	35,634
4	ಮೆ// ಪುಷ್ಪಕ್ ಏಜೆನ್ಸೀಸ್, ಮೈಸೂರು	48,587
5	ಮೆ// ಅಭಯ್ ಎಂಟರ್‌ಪ್ರೈಸಸ್, ಮೈಸೂರು	81,739
6	ಮೆ// ಸಾಯಿ ಇಂಡಸ್ಟ್ರೀಸ್, ಮೈಸೂರು	3,96,480
7	ಮೆ// ನವನೀತ್ ಕ್ಯಾಟರಿಂಗ್, ಮೈಸೂರು	13,48,673
8	ಮೆ// ನೆನಪು ಪ್ರಿಂಟರ್ಸ್, ಮೈಸೂರು	21,004
	ಒಟ್ಟು ಮೊತ್ತ	**22,67,474/-**

ಮೇಲ್ಕಂಡ ಪಟ್ಟಿಯಲ್ಲಿರುವಂತೆ ಬಾಬ್ತನ್ನು ಖರ್ಚು ಮಾಡಿರುವ ಬಗ್ಗೆ ಬಿಲ್ಲುಗಳು ಮತ್ತು ವೋಚರ್ಸ್‌ಗಳು ಮತ್ತು ಸರಬರಾಜುದಾರ ಬ್ಯಾಂಕ್ ಖಾತೆಗಳಿಗೆ ಮೊತ್ತ ಪಾವತಿಯಾಗಿರುವ ಬಗ್ಗೆ ವಿವರ ಹಾಗೂ ಇನ್ನಿತರೆ ದಾಖಲಾತಿಯ ದೃಢೀಕೃತ ಪ್ರತಿಗಳನ್ನು ಲೆಕ್ಕಪರಿಶೋಧನೆಗೆ ಒದಗಿಸುವುದು ಮತ್ತು ಸದರಿ ಬಾಬ್ತನ್ನು ಕಛೇರಿಯ ಸಾಮಾನ್ಯ ನಗದು ಪುಸ್ತಕದಲ್ಲಿ ಲೆಕ್ಕಕ್ಕೆ ತೆಗೆದುಕೊಂಡಿರುವ ಬಗ್ಗೆ ಹಾಗೂ ಸಾಮಾನ್ಯ ರಶೀದಿಯನ್ನು ನೀಡಿರುವ ಬಗ್ಗೆ ದಾಖಲಾತಿಗಳ ದೃಢೀಕೃತ ಪ್ರತಿಗಳೊಂದಿಗೆ ಪಾಲನಾ ವರದಿಯನ್ನು ಸಲ್ಲಿಸುವುದು. **ಅಲ್ಲಿಯವರೆಗೂ ರೂ.22,67,474/- ಗಳನ್ನು ಆಕ್ಷೇಪಣೆಯಲ್ಲಿರಿಸಲಾಗಿದೆ.**

ಕಂಡಿಕೆ : 13 – ಕೆ.ಟಿ.ಪಿ.ಪಿ ನಿಯಮಗಳನ್ನು ಉಲ್ಲಂಘಿಸಿ ಸಾಮಾಗ್ರಿಗಳನ್ನು ಖರೀದಿಸಿರುವ ಬಗ್ಗೆ:-

ಪೊಲೀಸ್ ಅಧೀಕ್ಷಕರು, ಮೈಸೂರು ಜಿಲ್ಲೆ ರವರ ಕಛೇರಿಯ ಸಂಗ್ರಹ ಶಾಖೆಯ ಕಡತಗಳು ಮತ್ತು ಬಿಲ್ಲುಗಳನ್ನು ಪರಿಶೀಲಿಸಲಾಗಿ, **2022-23** ನೇ ಸಾಲಿನಲ್ಲಿ ಸಾಮಗ್ರಿ/ಸೇವೆಗಳನ್ನು ಕೆ.ಟಿ.ಪಿ.ಪಿ ನಿಯಮಗಳನ್ವಯ ಟೆಂಡರ್ ಮುಖಾಂತರ ಸಂಗ್ರಹಣೆ ಮಾಡದೇ ದರಪಟ್ಟಿಗಳ ಮುಖಾಂತರ ಖರೀದಿಸಿರುವುದು ಲೆಕ್ಕಪರಿಶೋಧನೆಯಿಂದ ಕಂಡುಬಂದಿರುತ್ತದೆ. ಟೆಂಡರ್ ತಪ್ಪಿಸುವ ಉದ್ದೇಶದಿಂದ ಖರೀದಿಗಳನ್ನು ವಿಭಜಿಸಿ ದರಪಟ್ಟಿ ಮೂಲಕ ಸಾಮಗ್ರಿಗಳನ್ನು ಖರೀದಿಸಲಾಗಿದೆ. ರೂ.5.00 ಲಕ್ಷಕ್ಕೂ ಮೀರಿದ ಮೊತ್ತಕ್ಕೆ ಸಂಗ್ರಹಣೆ ಮಾಡಿರುವ ಸಾಮಗ್ರಿಗಳನ್ನು ಸಹ ದರಪಟ್ಟಿ ಮೂಲಕ ಪಡೆದು ಕೆ.ಟಿ.ಪಿ.ಪಿ ಕಾಯ್ದೆಯನ್ನು ಉಲ್ಲಂಘಿಸಿರುವುದು ಲೆಕ್ಕಪರಿಶೋಧನೆಯಿಂದ ಕಂಡುಬಂದಿರುತ್ತದೆ. ವಿವರಗಳನ್ನು **'ಅನುಬಂಧ- ಎ'** ನಲ್ಲಿ ಲಗತ್ತಿಸಿದೆ.

ಆದ್ದರಿಂದ, ಈ ಬಗ್ಗೆ ಸೂಕ್ತ ವಿವರಣೆಯನ್ನು ನೀಡುವುದು ಹಾಗೂ *'ಅನುಬಂಧ-ಎ'* ನಲ್ಲಿರುವ ಸಾಮಗ್ರಿಗಳನ್ನು ದಾಸ್ತಾನಿಗೆ ಲೆಕ್ಕಕ್ಕೆ ತೆಗೆದುಕೊಂಡಿರುವ ಬಗ್ಗೆ ದೃಢೀಕೃತ ದಾಖಲಾತಿಗಳೊಂದಿಗೆ ಪಾಲನಾ ವರದಿಯನ್ನು ನೀಡುವುದು. **ಅಲ್ಲಿಯವರೆಗೂ ರೂ.41,07,325/- ಗಳನ್ನು ಆಕ್ಷೇಪಣೆಯಲ್ಲಿರಿಸಲಾಗಿದೆ.**

ಕಂಡಿಕೆ : 14 – ಜೆರಾಕ್ಸ್ ಮೆಷಿನ್‌ಗಳ ನಿರ್ವಹಣೆಗಾಗಿ ಎ.ಎಂ.ಸಿ ನೀಡಿರುವ ಬಗ್ಗೆ:-

ಪೊಲೀಸ್ ಅಧೀಕ್ಷಕರು, ಮೈಸೂರು ಜಿಲ್ಲೆ ರವರ ಕಛೇರಿಯ ಸಂಗ್ರಹ ಶಾಖೆಯ ಕಡತಗಳು ಮತ್ತು ಬಿಲ್ಲುಗಳನ್ನು ಪರಿಶೀಲಿಸಲಾಗಿ, ಘಟಕದ ಜೆರಾಕ್ಸ್ ಮೆಷಿನ್‌ಗಳ ವಾರ್ಷಿಕ ನಿರ್ವಹಣೆಯನ್ನು ಕೆಳಕಂಡ ಪಟ್ಟಿಯಲ್ಲಿರುವಂತೆ 2022-23ನೇ ಸಾಲಿನಲ್ಲಿ ಎ.ಎಂ.ಸಿ ಅನ್ನು ದರಪಟ್ಟಿ ಮುಖಾಂತರ ನೀಡಿರುವುದು ಲೆಕ್ಕಪರಿಶೋಧನೆಯಿಂದ ಕಂಡುಬಂದಿರುತ್ತದೆ. ವಿವರಗಳು ಕೆಳಕಂಡಂತಿರುತ್ತದೆ.

ಅನುಬಂಧ–'ಎ'

(ಕಂಡಿಕೆ: 13– ಕೆ.ಟಿ.ಪಿ.ಪಿ ನಿಯಮಗಳನ್ನು ಉಲ್ಲಂಘಿಸಿ ಸಾಮಾಗ್ರಿಗಳನ್ನು ಖರೀದಿಸಿರುವ ಬಗ್ಗೆ)

ಕ್ರ ಸಂ	ಡಿಸಿ ಬಿಲ್/ ಟೋಕನ್ ಸಂಖ್ಯೆ	ಖರೀದಿಸಿದ ಸಾಮಾಗ್ರಿ ವಿವರ	ಸರಬರಾಜುದಾರರ ಹೆಸರು ಮತ್ತು ವಿಳಾಸ	ಖರೀದಿಸಿದ ಮೊತ್ತ ರೂ.
1	ಡಿಸಿ–35/2022–23	01 ಸಂಖ್ಯೆ ಡ್ರೋನ್ ಕ್ಯಾಮರಾ ಖರೀದಿ	ಮೆ// ಚಿಪ್ಸ್‌ಕೇಪ್ ಸೆಕ್ಯೂರಿಟಿ ಸಿಸ್ಟಮ್ಸ್, ಚಿಕ್ಕಮಗಳೂರು	4,11,820
2	ಡಿಸಿ–36/2022–23	ನಂಜನಗೂಡು ಉಪವಿಭಾಗದ ಪೊಲೀಸ್ ಠಾಣೆಗಳ ಅವಶ್ಯಕತೆ ಇರುವ ರಿಜಿಸ್ಟರ್‌ಗಳ ಖರೀದಿ	ಮೆ// ಅನು ಪ್ರಿಂಟರ್ಸ್, ಬೆಂಗಳೂರು	2,67,358
3	ಡಿಸಿ–100/2022–23	ಜೆರಾಕ್ಸ್ ಯಂತ್ರಗಳ ಖರೀದಿ	ಮೆ// ಓಂಕಾರ್ ಆಫೀಸ್ ಸಲ್ಯೂಷನ್ಸ್, ಬಳ್ಳಾರಿ	1,77,007
4	ಡಿಸಿ–106/2022–23	ಮೈಸೂರು ಗ್ರಾಮಾಂತರ ಉಪವಿಭಾಗ ಮತ್ತು ಡಿ.ಎ.ಆರ್. ಕಛೇರಿಗೆ ಪೀಠೋಪಕರಣಗಳ ಖರೀದಿ	ಮೆ// ಯೂನಿವರ್ಸಲ್ ಸಲ್ಯೂಷನ್ಸ್, ಹಾವೇರಿ	3,48,100
5	ಡಿಸಿ–181/2022–23	100 ಸಂಖ್ಯೆಯ ಮೆಟಲ್ ಟ್ರಂಕ್ ಮತ್ತು ಕಿಟ್‌ಗಳ ಖರೀದಿ	M/s Karnataka Coir Foam & Allied Industrial Corporation, Mysuru	2,47,800
6	ಡಿಸಿ–182/2022–23	Wood Floor Fixture	M/s Architectainer, Mysuru	1,83,870
7	ಡಿಸಿ–185/2022–23	ರಿಜಿಸ್ಟರ್‌ಗಳ ಖರೀದಿ	ಮೆ// ಶಬರಿ ಪ್ರಿಂಟರ್ಸ್, ಬೆಂಗಳೂರು	4,70,879
8	2203653873	ಸಂಚಾರ ಸಾಮಗ್ರಿಗಳ ಖರೀದಿ	ಮೆ// ಆರ್ಯಭಟ ಎಂಟರ್‌ಪ್ರೈಸಸ್, ಬೆಂಗಳೂರು ಮೆ// ಸಿದ್ದೇಶ್ವರ ಎಂಟರ್‌ಪ್ರೈಸಸ್, ಬೆಂಗಳೂರು ಮೆ// ಭರಣಿ ಎಂಟರ್‌ಪ್ರೈಸಸ್, ಮಂಡ್ಯ	20,00,491
			ಒಟ್ಟು ಮೊತ್ತ ರೂ.	**41,07,325/–**

17/9/24

(ಎಸ್.ರೇಣುಕಾ)
ಜಂಟಿ ನಿಯಂತ್ರಕರು, (ಹಣಕಾಸು)
ಮಹಾನಿರ್ದೇಶಕರು ಮತ್ತು ಪೊಲೀಸ್
ಮಹಾನಿರೀಕ್ಷಕರು ರವರ ಪರವಾಗಿ.
17/9/24

ಕರ್ನಾಟಕ ಸರ್ಕಾರ
(ಪೊಲೀಸ್ ಇಲಾಖೆ)

ಸಂಖ್ಯೆ: ಲೆಪದ(2)/82/2019–20

ಡೈರೆಕ್ಟರ್ ಜನರಲ್ ಮತ್ತು ಇನ್ಸ್‌ಪೆಕ್ಟರ್
ಜನರಲ್ ಆಫ್ ಪೊಲೀಸ್ ರವರ ಕಛೇರಿ,
ಕರ್ನಾಟಕ ರಾಜ್ಯ ಬೆಂಗಳೂರು
ದಿನಾಂಕ: 19.08.2021.

ಇವರಿಗೆ,

ಪೊಲೀಸ್ ಅಧೀಕ್ಷಕರು,
ಮಂಡ್ಯ ಜಿಲ್ಲೆ,
ಮಂಡ್ಯ

ಮಾನ್ಯರೆ,

ವಿಷಯ:– ಪೊಲೀಸ್ ಅಧೀಕ್ಷಕರು, ಮಂಡ್ಯ ರವರ ಕಛೇರಿಯ ದಿ: 01.04.2019ರಿಂದ 31.03.2020ರ (01 ವರ್ಷ) ಆರ್ಥಿಕ ವರ್ಷದ ಅವಧಿಗೆ ಸಂಬಂಧಿಸಿದ ಲೆಕ್ಕಪರಿಶೋಧನಾ ವರದಿಯ ಬಗ್ಗೆ.

ಉಲ್ಲೇಖ:– ಪೊಲೀಸ್ ಪ್ರಧಾನ ಕಛೇರಿಯ ಜ್ಞಾಪನ ಪತ್ರ ಸಂಖ್ಯೆ:ಲೆಪದ/15/ 2020–21. ದಿನಾಂಕ:05/08/2020 ಮತ್ತು 21/11/2020

* * *

ಪ್ರಧಾನ ಕಛೇರಿ ಲೆಕ್ಕ ಪರಿಶೋಧಕರು ತಮ್ಮ ಕಛೇರಿಯ 2019–20ನೇ ಸಾಲಿನ ಲೆಕ್ಕ ಪರಿಶೋಧನೆಯನ್ನು ಕೈಗೊಂಡಿದ್ದು, ತತ್ಸಂಬಂಧದ ಲೆಕ್ಕ ಪರಿಶೋಧನಾ ವರದಿಯನ್ನು ಇದರೊಂದಿಗೆ ಲಗತ್ತಿಸಿ ಕಳುಹಿಸಿದೆ.

ಆದ್ದರಿಂದ 2019–20ನೇ ಸಾಲಿನ ಲೆಕ್ಕ ಪರಿಶೋಧನಾ ವರದಿಯಲ್ಲಿ ತಿಳಿಸಿರುವಂತೆ ಸೂಕ್ತ ಕ್ರಮ ಕೈಗೊಂಡು ಪಾಲನಾ ವರದಿಯನ್ನು 30 ದಿವಸಗಳೊಳಗಾಗಿ ಈ ಕಛೇರಿಗೆ ಕಳುಹಿಸಿಕೊಡಲು ಕೋರಲಾಗಿದೆ.

ತಮ್ಮ ವಿಶ್ವಾಸಿ,

(ಸೀಮಾ ಲಾಟ್ಕರ್, ಐ.ಪಿ.ಎಸ್.),
ಎ.ಐ.ಜಿ.ಪಿ, (ಅಪರಾಧ) ಮತ್ತು
ಡಿ.ಐ.ಜಿ.ಪಿ.(ಕೇಂದ್ರಸ್ಥಾನ–2), (ಪ್ರಭಾರ)
ಮಹಾನಿರ್ದೇಶಕರು ಮತ್ತು ಪೊಲೀಸ್
ಮಹಾನಿರೀಕ್ಷಕರುರವರ ಪರವಾಗಿ.

ಪ್ರತಿಯನ್ನು:–

ಪೊಲೀಸ್ ಮಹಾನಿರೀಕ್ಷಕರು, ದಕ್ಷಿಣ ವಲಯ, ಮೈಸೂರು ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.

ಕಳುಹಿಸಲಾಗಿದೆ
19/08/2021

ಪೊಲೀಸ್ ಅಧೀಕ್ಷಕರು, ಮಂಡ್ಯ ಜಿಲ್ಲೆ ರವರ ಕಛೇರಿಯ ದಿನಾಂಕ: 01.04.2019 ರಿಂದ 31.03.2020 (01 ಆರ್ಥಿಕ ವರ್ಷ) ಅವಧಿಗೆ ಸಂಬಂಧಿಸಿದ ಲೆಕ್ಕ ಪರಿಶೋಧನಾ ವರದಿಯಲ್ಲಿ ಆಕ್ಷೇಪಣೆಯಲ್ಲಿಡಲಾದ ಮತ್ತು ವಸೂಲಾತಿಗೆ ಸೂಚಿಸಿರುವ ವಿವರಣಾ ಪಟ್ಟಿ.

ಕ್ರ ಸಂ	ಕಂಡಿಕೆ ಸಂಖ್ಯೆ	ವಿವರಗಳು	ಆಕ್ಷೇಪಣೆಯಲ್ಲಿಡ ಲಾದ ಮೊತ್ತ ರೂ.	ವಸೂಲಾತಿಗೆ ಸೂಚಿಸಲಾದ ಮೊತ್ತ ರೂ.
.	01	(1) ನಗದು ಪರಿಶೀಲನೆ.	-	-
2.		(2) ಖಾಯಂ ಮುಂಗಡದ ಬಗ್ಗೆ.	200000.00	-
3.	02	ಉಳಿತಾಯ ಖಾತೆಯ ಬಗ್ಗೆ.	9908.50	-
4.	03	ನಗದು ಶಾಖೆಯಲ್ಲಿ ಸಾಮಾನ್ಯ ರಶೀದಿ ಪುಸ್ತಕವನ್ನು ನಿರ್ವಹಿಸುವ ಬಗ್ಗೆ.	-	-
5.	04	ಭದ್ರತಾ ಠೇವಣಿಯನ್ನು ನಿರ್ವಹಿಸದೇ ಇರುವ ಬಗ್ಗೆ.	-	
6.	05	ಕ್ಷೇಮ ನಿಧಿಯ ನಗದು ಪುಸ್ತಕದ ಪರಿಶೀಲನೆಯ ಬಗ್ಗೆ	-	
7.	06	ಕ್ಷೇಮನಿಧಿ ಸ್ಥಿರ ಠೇವಣಿ ಹೂಡಿಕೆಗಳ ವಿವರ	-	-
8.	07	ನಿವೃತ್ತ ಪೊಲೀಸ್ ಅಧಿಕಾರಿಗಳ ಕ್ಷೇಮ ನಿಧಿ ಬಗ್ಗೆ.	204995.00	-
9.	08	ನಿವೃತ್ತ ಪೊಲೀಸ್ ಅಧಿಕಾರಿಗಳ ಕಲ್ಯಾಣ ನಿಧಿಯ ಸ್ಥಿರ ಠೇವಣಿ ವಿವರ.	-	-
10.	09	ಪೊಲೀಸ್ ಕ್ರೀಡಾ ನಿಧಿ.	-	-
11.	10	2019ನೇ ಅವಧಿಯ ಗಳಿಕೆ ರಜೆ ನಗಧೀಕರಣ ಬಿಲ್ಲಿನಲ್ಲಿ ಹೆಚ್ಚುವರಿಯಾಗಿ ಇತರೆ ಭತ್ಯೆ ಮಂಜೂರು ಮಾಡಿರುವ ಬಗ್ಗೆ.	-	468.00
12.	11	ವಾರದ ರಜೆ ಭತ್ಯೆ ಬಿಲ್ಲಿನಲ್ಲಿ ವಿವಿಧ ಪೊಲೀಸ್ ಠಾಣೆಗಳಿಂದ ಹಾಜರಾತಿಗೆ ಸಹಿ ಪಡೆಯದೇ ಮಂಜೂರು ಮಾಡಿರುವ ಬಗ್ಗೆ.	460200.00	-
13.	12	ನಗದು ಬಹುಮಾನವನ್ನು ವಿತ್ತಾಧಿಕಾರ ಮೀರಿ ಹೆಚ್ಚುವರಿಯಾಗಿ ಮಂಜೂರು ಮಾಡಿರುವ ಬಗ್ಗೆ.	119400.00	-
14.	13	ಸೇವಾ ಪುಸ್ತಕಗಳ ಪರಿಶೀಲನೆ ಕುರಿತು.	-	-
15.	14	ತನಿಖಾ ವೆಚ್ಚ ಕುರಿತು.	438505.00	-
16.	15	ಸಂಗ್ರಹ ಶಾಖೆಯ ಭೌತಿಕ ಪರಿಶೀಲನೆ ಕೈಗೊಳ್ಳುವ ಬಗ್ಗೆ.	-	-
17.	16	ಜಿ.ಎಸ್.ಟಿ. ಸಂಬಂಧ ದಾಖಲೆಗಳನ್ನು ಒದಗಿಸದೇ ಇರುವ ಬಗ್ಗೆ.	-	-
18.	17	2019-20ರ ಅವಧಿಯಲ್ಲಿರುವ ನಿರುಪಯುಕ್ತ ವಸ್ತುಗಳ ಮಾಹಿತಿ ಒದಗಿಸದೇ ಇರುವ ಬಗ್ಗೆ.	-	-
19.	18	ವಿವಿಧ ಸಂಸ್ಥೆಗಳಿಂದ ಆದಾಯ ತೆರಿಗೆಯನ್ನು ಕಟಾಯಿಸದೇ ಇರುವ ಬಗ್ಗೆ.	-	8752.00
20.	19	ಸರ್ಕಾರಿ ವಾಹನಗಳಿಗೆ ಬಾರ್‌ಲೈಟ್ ಖರೀದಿ ಹಾಗೂ ಸ್ಪೀಡ್ ಗೌರ್ನರ್ ಅಳವಡಿಕೆ ಬಗ್ಗೆ.	879360.00	-
21.	20	059 ಇತರೆ ವೆಚ್ಚ (ನೇಮಕಾತಿ) ಬದಲಾಗಿ 051 ಸಾಮಾನ್ಯ ವೆಚ್ಚಗಳು ಲೆಕ್ಕ ಶೀರ್ಷಿಕೆಯಲ್ಲಿ ನಿಯಮವನ್ನು ಉಲ್ಲಂಘಿಸಿ ಲೇಖನ ಸಾಮಾಗ್ರಿ ಮತ್ತು ಸಾಮಾಗ್ರಿಗಳನ್ನು ಖರೀದಿಸಿರುವ ಬಗ್ಗೆ.	37502.00	-
22.	21	ಘಟಕದಲ್ಲಿ ಉಪಕರಣಗಳು / ಸಾಧನ ಸಾಮಾಗ್ರಿಗಳ ಖರೀದಿ ಕುರಿತು.	7862047.00	-
23.	22	(ಎ) ಸ್ಥಳ ದಂಡದ ಮೊತ್ತವನ್ನು ಖಜಾನೆಯಿಂದ ಲೆಕ್ಕಸಮನ್ವಯ ಮಾಡುವ ಬಗ್ಗೆ.	21990300.00	-
24.		(ಬಿ) ಸಂಚಾರ ನಿಯಮಗಳ ಉಲ್ಲಂಘನೆಯಿಂದ ಸಂಗ್ರಹಿಸಲಾದ ಸ್ಥಳ ದಂಡದ ಮೊತ್ತವನ್ನು ಸರ್ಕಾರಕ್ಕೆ ಜಮಾ ಮಾಡಿದ ಬಗ್ಗೆ ಚಲನ್ ಒದಗಿಸುವ ಕುರಿತು.	306500.00	-

		(ಸಿ) ನಾಗಮಂಗಲ ಉಪ ವಿಭಾಗ ಕಛೇರಿ ಹಾಗೂ ಮದ್ದೂರು ಸಂಚಾರ ಠಾಣೆಗಳಲ್ಲಿ ದಾಖಲೆಗಳನ್ನು ಒದಗಿಸದೇ ಇರುವ ಬಗ್ಗೆ		
	23	ಸಾರ್ವಜನಿಕರಿಂದ ಸಂಗ್ರಹಿಸಲಾದ ಕೋಟ್ಪಾ ಮೊತ್ತವನ್ನು ಲೆಕ್ಕ ಸಮನ್ವಯಗೊಳಿಸುವ ಬಗ್ಗೆ.	66290.00	
	24(1)	ಇಲಾಖೆಗೆ ಪಾವತಿಸುವ ಪರಿಶೀಲನಾ ಶುಲ್ಕದ ದಾಖಲೆಗಳನ್ನು ಒದಗಿಸದೇ ಇರುವ ಬಗ್ಗೆ.	-	
	24(2)	ಎಂ.ವಿ.ಐ.ಸಿ. ಕುರಿತಂತೆ ದಾಖಲೆಗಳನ್ನು ಒದಗಿಸದೇ ಇರುವ ಬಗ್ಗೆ.	-	
	24(3)	ಧ್ವನಿವರ್ಧಕ ಪರವಾನಗಿಯಲ್ಲಿ ಸಂಗ್ರಹಿಸಿದ ಶುಲ್ಕಕ್ಕೆ ಕುರಿತಂತೆ ದಾಖಲೆಗಳನ್ನು ಒದಗಿಸದೇ ಇರುವ ಬಗ್ಗೆ	-	
	25	ಘಟಕದ ಸ್ಥಿರಾಸ್ತಿಗಳಿಗೆ ವಾರ್ಷಿಕವಾಗಿ ತೆರಿಗೆ ಪಾವತಿಸದೇ ಇರುವ ಬಗ್ಗೆ.	-	
	26	ವಾಹನಗಳಿಗೆ ಹೊಸದಾಗಿ ಟೈರ್ ಮತ್ತು ಟ್ಯೂಬ್‌ಗಳನ್ನು ಖರೀದಿಸಿರುವ ಬಗ್ಗೆ.	-	-
	27	ವಾರಸುದಾರಿಲ್ಲದ ವಾಹನಗಳನ್ನು ಸಾರ್ವಜನಿಕ ಬಹಿರಂಗ ಹರಾಜು ಮಾಡಿದ ಬಗ್ಗೆ.	-	-
	28(ಅ)	ವಾಹನಗಳ ನಿರುಪಯುಕ್ತ ಬಿಡಿ ಭಾಗಗಳು, ಟೈರುಗಳು ಮತ್ತು ಆಯಿಲ್‌ನ್ನು ಟೆಂಡರ್ ಕಂ ಬಹಿರಂಗ ಹರಾಜು ಮಾಡುವ ಬಗ್ಗೆ.	-	-
	28(ಇ)	ನಿರುಪಯುಕ್ತರಿಗೊಳಿಸಿದ ವಾಹನಗಳನ್ನು ಹರಾಜು ಮಾಡುವ ಬಗ್ಗೆ.	-	-
	29	2019-20ನೇ ಸಾಲಿನಲ್ಲಿ ಬಿಡುಗಡೆಯಾದ ಅನುದಾನ, ಖರ್ಚಾದ ಅನುದಾನ, ಉಳಿದ/ ಅದ್ಯರ್ಜಿಸಲಾದ ಅನುದಾನ ವಿವರ.	-	-
	30	ವೈದ್ಯಕೀಯ ವೆಚ್ಚ ಮರುಪಾವತಿಗೆ ಬಗ್ಗೆ.	1699493.00	-
	31	ಹಳೆಯ ದಿನಪತ್ರಿಕೆಗಳನ್ನು ವಿಲೇವಾರಿ ಮಾಡುವ ಬಗ್ಗೆ.	-	-
	32	ಪ್ರಯಾಣ ಭತ್ಯೆ ಕುರಿತು	-	117308.00
	33	ಇಲಾಖಾ ಹೆಸರಿನಲ್ಲಿ ಹೊಂದಿರುವ ಒಟ್ಟಾರೆ ಭೂಮಿಯನ್ನು ಸರ್ವೆ ಮಾಡಿಸುವ ಬಗ್ಗೆ.	-	-
	34 (01 ರಿಂದ 05)	ಆಂತರಿಕ ಲೆಕ್ಕ ಪರಿಶೋಧನಾ ವಿಚಾರಣಾ ಟಿಪ್ಪಣಿಗಳಿಗೆ ಲೆಕ್ಕ ಪರಿಶೋಧನಾ ಅವಧಿಯಲ್ಲಿ ಪೂರಕ ದಾಖಲೆಗಳನ್ನು ಒದಗಿಸದೇ ಇರುವ ಬಗ್ಗೆ.	-	-
		ಒಟ್ಟು ಮೊತ್ತ ರೂ.	3,42,74,500.50	1,26,528.00

(ಸೀಮಾ ಲಾಟ್ಕರ್, ಐ.ಪಿ.ಎಸ್.),
ಎ.ಐ.ಜಿ.ಪಿ. (ಅಪರಾಧ) ಮತ್ತು
ಡಿ.ಐ.ಜಿ.ಪಿ.(ಕೇಂದ್ರಸ್ಥಾನ-2), (ಪ್ರಭಾರ)
ಮಹಾನಿರ್ದೇಶಕರು ಮತ್ತು ಪೊಲೀಸ್
ಮಹಾನಿರೀಕ್ಷಕರುರವರ ಪರವಾಗಿ.

123

ಕಂಡಿಕೆ 21 – ಘಟಕದಲ್ಲಿ ಉಪಕರಣಗಳು / ಸಾಧನ ಸಾಮಾಗ್ರಿಗಳ ಖರೀದಿ ಕುರಿತು.

ಪೊಲೀಸ್ ಅಧೀಕ್ಷಕರು, ಮಂಡ್ಯ ಜಿಲ್ಲಾ ಅಧೀನದಲ್ಲಿ ಬರುವ ಉಪ ವಿಭಾಗಗಳ ಅಧೀನದಲ್ಲಿ ಬರುವ ವಿವಿಧ ಪೊಲೀಸ್ ಹಾಗೂ ಸಂಚಾರಿ ಪೊಲೀಸ್ ಠಾಣೆಗಳಿಗೆ ಅವಶ್ಯವಿರುವ ಸರಕು ಸಾಮಾಗ್ರಿಗಳು / ಉಪಕರಣಗಳನ್ನು ಖರೀದಿಸಿದ್ದು, ಖರೀದಿಗೆ ತಗಲುವ ಮೊತ್ತವು ರೂ.1.00 ಲಕ್ಷಕ್ಕಿಂತಲೂ ಹೆಚ್ಚಿನ ಪ್ರಮಾಣದಲ್ಲಿದ್ದರೆ, ಕೆ.ಟಿ.ಪಿ.ಪಿ. ಕಾಯ್ದೆ 1999 ಮತ್ತು ನಿಯಮ 2000 ನಿಯಮಗಳಡಿಯಲ್ಲಿ ಟೆಂಡರ್ ಪ್ರಕ್ರಿಯೆಗಳ ಮೂಲಕ ಖರೀದಿ ಮಾಡಬೇಕಾಗಿತ್ತು. ಆದರೆ ಅನುಬಂಧ–'ಅ'ನಲ್ಲಿ ವಿವರಿಸಲಾಗಿರುವ ಸರಕು ಸಾಮಾಗ್ರಿಗಳು/ಉಪಕರಣಗಳನ್ನು ಒಂದು ಲಕ್ಷ ರೂಪಾಯಿಗಳೊಳಗೆ ಸೀಮಿತಗೊಳಿಸಿ, ಸ್ಪರ್ಧಾತ್ಮಕ ದರಪಟ್ಟಿಗಳ ಮೂಲಕ ಬಿಡಿ–ಬಿಡಿಯಾದ ಆದೇಶಗಳ ಅಡಿಯಲ್ಲಿ ಖರೀದಿಸಲಾಗಿರುವುದು ಹಾಗೂ ಟೆಂಡರ್ ಪ್ರಕ್ರಿಯೆಯನ್ನು ತಪ್ಪಿಸಲು ಖರೀದಿಗಳನ್ನು ವಿಭಜಿಸಿರುವುದು ಲೆಕ್ಕ ಪರಿಶೋಧನಾ ಸಮಯದಲ್ಲಿ ಒದಗಿಸಲಾದ ದಾಖಲೆಗಳಿಂದ ಕಂಡು ಬಂದಿದ್ದು, ವಿವರವನ್ನು **ಅನುಬಂಧ–'ಅ'**ದಲ್ಲಿ ತೋರಿಸಲಾಗಿದೆ.

ಅನುಬಂಧ–'ಅ'ನಲ್ಲಿ ವಿವರಿಸಿರುವಂತೆ ಎಲ್ಲಾ ಸರಕು ಸಾಮಗ್ರಿಗಳು/ಉಪಕರಣಗಳನ್ನು ಸ್ಪರ್ಧಾತ್ಮಕ ದರಪಟ್ಟಿಗಳ ಮುಖಾಂತರ ಬೇರೆ ಬೇರೆ ದಿನಾಂಕಗಳಲ್ಲಿ ಬೇರೆ ಬೇರೆ ಸರಕು ಸಾಮಗ್ರಿಗಳನ್ನು ಒಂದೇ ಕಂಪನಿ/ಸಂಸ್ಥೆಯಿಂದ ಖರೀದಿಸುವುದು ನಿಯಮಬಾಹಿರವಾಗಿರುತ್ತದೆ. ಎಲ್ಲಾ ಸಾಮಗ್ರಿಗಳನ್ನು ಸೇರಿಸಿ 1.00 ಲಕ್ಷ ಮೊತ್ತ ಮೀರಿದ ನಂತರ ಮ್ಯಾನ್ಯುಯಲ್ ಟೆಂಡರ್/ಇ–ಪ್ರೊಕ್ಯೂರ್‌ಮೆಂಟ್ ಮಾಡಬಹುದಾಗಿತ್ತು. ಆದರೆ ಇದೇ ರೀತಿ ಘಟಕದಲ್ಲಿ ಖರೀದಿಸಿರುವ ಎಲ್ಲಾ ಸರಕು ಸಾಮಗ್ರಿ ಮತ್ತು ಇತರೆ ಸಾಮಗ್ರಿಗಳನ್ನು ದರಪಟ್ಟಿ ಮುಖಾಂತರ ಖರೀದಿಸಿರುವುದು ಕೆ.ಟಿ.ಪಿ.ಪಿ. ಕಾಯ್ದೆಯನ್ನು / ಕಾಲ ಕಾಲಕ್ಕೆ ಹೊರಡಿಸಲಾದ ಸರ್ಕಾರದ ಸುತ್ತೋಲೆ ಹಾಗೂ ಆದೇಶಗಳನ್ನು ಉಲ್ಲಂಘಿಸಿದಂತಾಗಿದೆ. ಆದ್ದರಿಂದ ಕೆ.ಟಿ.ಪಿ.ಪಿ. ನಿಯಮ 23ರನ್ವಯ ಸಂಬಂಧಪಟ್ಟವರ ವಿರುದ್ಧ ಕ್ರಮ ಕೈಗೊಂಡು ಪಾಲನಾ ವರದಿಯನ್ನು ಸಲ್ಲಿಸುವವರೆವಿಗೂ **ರೂ.7862047.00**ಗಳನ್ನು ಆಕ್ಷೇಪಣೆಯಲ್ಲಿರಿಸಲಾಗಿದೆ.

ಕಂಡಿಕೆ 22 – ಸ್ಥಳ ದಂಡದ ಮೊತ್ತವನ್ನು ಖಜಾನೆಯಿಂದ ಲೆಕ್ಕಸಮನ್ವಯ ಮಾಡುವ ಬಗ್ಗೆ.

(ಎ) ಘಟಕಕ್ಕೆ ಸಂಬಂಧಿಸಿದಂತೆ ಎಲ್ಲಾ ಠಾಣಾ, ವೃತ್ತ ಕಛೇರಿ ಮತ್ತು ಡಿ.ಎಸ್.ಪಿ. ಕಛೇರಿಗಳಿಂದ ದಿನಾಂಕ:01–04–2019 ರಿಂದ 31–03–2020ರವರೆಗೆ ಸಾರ್ವಜನಿಕರಿಂದ ಸಂಗ್ರಹಿಸಲಾದ ಸ್ಥಳದಂಡದ (ಐಎಂವಿ) ಮೊತ್ತವನ್ನು ಜಮೆ ಮಾಡಿದ ಮೊತ್ತದ ವಿವರ ಈ ಕೆಳಗಿನಂತಿದೆ.

ಕ್ರ. ಸಂ.	ವರ್ಷವಾರು	ದಾಖಲಾದ ಒಟ್ಟು ಪ್ರಕರಣಗಳ ಸಂಖ್ಯೆ (ನ್ಯಾಯಾಲಯ ಪ್ರಕರಣಗಳು ಹೊರತುಪಡಿಸಿ)	ಸಂಗ್ರಹವಾದ ಒಟ್ಟು ಮೊತ್ತ ರೂ.
1.	2019-20	73,909	2,19,90,300-00

ಮೇಲೆ ವಿವರಿಸಿರುವಂತೆ ಸಾರ್ವಜನಿಕರಿಂದ ಸಂಗ್ರಹಿಸಲಾದ ಸ್ಥಳದಂಡ ಮೊತ್ತವನ್ನು ಜಮೆ ಮಾಡಿದ ಮೊತ್ತದ ಬಗ್ಗೆ ಮಾಹಿತಿಯ ಧೃಢೀಕೃತ ದಾಖಲಾತಿಗಳೊಂದಿಗೆ ಮತ್ತು ಸದರಿ ಮೊತ್ತವನ್ನು ಲೆಕ್ಕಶೀರ್ಷಿಕೆ ಹಾಗೂ ಸರ್ಕಾರಿ ಖಜಾನೆಗೆ ಬ್ಯಾಂಕ್‌ನಲ್ಲಿ ಮಾಹೆಯಾನ ಸಂಗ್ರಹವಾದ ಮೊತ್ತವನ್ನು ಮನ್ವಯಗೊಳಿಸಿಕೊಂಡು ಮತ್ತು ಖಜಾನೆಯಲ್ಲಿ ಲೆಕ್ಕ ಸಮನ್ವಯ ಮಾಡಿ, ಸರ್ಕಾರದ ರಾಜಸ್ವ ಲೆಕ್ಕ ಶೀರ್ಷಿಕೆಗೆ ಜಮೆಯಾಗಿದೆಯೆಂದು ಈ ಕೆಳಗೆ ತಿಳಿಸಲಾಗಿರುವ ಅಂದಾಜಿಸಲಾದ ಮತ್ತು ಸಂಗ್ರಹವಾದ ಮೊತ್ತದ ಬಗ್ಗೆ ಕೆಟಿಸಿ–25ನ್ನು ಒದಗಿಸಲು ಮತ್ತು ಯಾವ ಯಾವ ಲೆಕ್ಕ ಶೀರ್ಷಿಕೆಗೆ ಎಷ್ಟು ಮೊತ್ತ ಜಮೆಯಾಗಿದೆಯೆಂಬ ಬಗ್ಗೆ ಧೃಢೀಕೃತ ದಾಖಲಾತಿಗಳೊಂದಿಗೆ ಪಾಲನಾ ವರದಿಯನ್ನು ಸಲ್ಲಿಸಲು ಸೂಚಿಸಿದೆ. ಸಲ್ಲಿಯವರೆವಿಗೂ ಅಂದಾಜಿಸಲಾದ ಒಟ್ಟು ಮೊತ್ತ ರೂ.**2,19,90,300-00**ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.

) ಸಂಚಾರ ನಿಯಮಗಳ ಉಲ್ಲಂಘನೆಯಿಂದ ಸಂಗ್ರಹಿಸಲಾದ ಸ್ಥಳ ದಂಡದ ಮೊತ್ತವನ್ನು ಸರ್ಕಾರಕ್ಕೆ ಜಮಾ ಮಾಡಿದ ಬಗ್ಗೆ ಚಲನ್ ಒದಗಿಸುವ ಕುರಿತು.

ಮಂಡ್ಯ ಸೆಂಟ್ರಲ್ ಪೊಲೀಸ್ ಠಾಣೆಗೆ ಸಂಬಂಧಿಸಿದಂತೆ, ಸಂಚಾರ ನಿಯಮಗಳ ಉಲ್ಲಂಘನೆಯಿಂದ ಸಂಗ್ರಹಿಸಲಾದ ಸ್ಥಳ ದಂಡ ವಹಿ, ರಶೀದಿ ಹಾಗೂ ಚಲನ್‌ಗಳನ್ನು ಲೆಕ್ಕ ಪರಿಶೋಧನೆಗೆ ಒಳಪಡಿಸಿದಾಗ, ಈ

122

285

ಅನುಬಂಧ–'ಅ'

ಘಟಕಕ್ಕೆ ಅವಶ್ಯವಿರುವ ಸರಕು ಸಾಮಾಗ್ರಿಗಳು / ಉಪಕರಣಗಳ ಖರೀದಿ ವಿವರ ಪಟ್ಟಿ

ಕ್ರ ಸಂ.	ಟೋಕನ್ ನಂ & ದಿನಾಂಕ	ಖರೀದಿಸಿದ ಸಾಮಾಗ್ರಿ/ಉಪಕರಣ	ಸಂಸ್ಥೆ ಹೆಸರು	ಮೊತ್ತ ರೂ.	ಒಟ್ಟು ಮೊತ್ತ ರೂ
1.	1901817540 24/10/2019	34 ಮೀಟರ್ ರಬ್ಬರ್ ಸ್ಪೀಡ್ ಬ್ರೇಕರ್	ಮೆ: ಭರಣಿ ಎಂಟರ್ ಪ್ರೈಸಸ್, ವಿವಿ ನಗರ, ಮಂಡ್ಯ	99790.00	293500.00
2.	1901817561 24/10/2019	32 ಮೀಟರ್ ರಬ್ಬರ್ ಸ್ಪೀಡ್ ಬ್ರೇಕರ್		93920.00	
3.		34 ಮೀಟರ್ ರಬ್ಬರ್ ಸ್ಪೀಡ್ ಬ್ರೇಕರ್		99790.00	
4.	1902458136 14/01/2020	13 ಸಂ. ಸೈನೇಜ್ ಬೋರ್ಡ್	ಮೆ:ವೀರಾಂಜನೇಯ ಇಂಜಿನಿಯರಿಂಗ್ ವರ್ಕ್ಸ್, ಶಿವಮೊಗ್ಗ	86450.00	254250.00
5.	1902866021 25/02/2020	10 ಸಂ. ಸೈನೇಜ್ ಬೋರ್ಡ್.		68600.00	
6.	1902726619 15/02/2020	16 ಸಂ. ಸೈನೇಜ್ ಬೋರ್ಡ್		99200.00	
7.	1902789512 19/02/2020	16 ಸಂ. ಪಿಡಿಎ ಡಿವೈಸ್	ಮೆ:ವೀರಾಂಜನೇಯ ಇಂಜಿನಿಯರಿಂಗ್ ವರ್ಕ್ಸ್, ಶಿವಮೊಗ್ಗ	88550x16= 1416800.00	1416800.00
8.	1902727063 15/02/2020	01 ಸಂ. ಪಿಡಿಎ ಡಿವೈಸ್		88550.00	354200.00
9.	1902727313 15/02/2020	01 ಸಂ. ಪಿಡಿಎ ಡಿವೈಸ್		88550.00	
10.		01 ಸಂ. ಪಿಡಿಎ ಡಿವೈಸ್		88550.00	
11.	1902735245 15/02/2020	01 ಸಂ. ಪಿಡಿಎ ಡಿವೈಸ್		88550.00	
12.	1901786166 18/10/2019	38 Nos Bodyworn Camera	ಮೆ:ವೀರಾಂಜನೇಯ ಇಂಜಿನಿಯರಿಂಗ್ ವರ್ಕ್ಸ್, ಶಿವಮೊಗ್ಗ	40500x38	1539000.00
13.	1901786166 18/10/2019	01 Nos Laser Speed meter	ಮೆ:ವೀರಾಂಜನೇಯ ಇಂಜಿನಿಯರಿಂಗ್ ವರ್ಕ್ಸ್, ಶಿವಮೊಗ್ಗ	925000.00	925000.00
14.	1901913564 13/11/2019	ಸಿಸಿ ಕ್ಯಾಮರಾಗಳು	ಮೆ: ರಾಘವೇಂದ್ರ ಕಂಪ್ಯೂಟರ್ಸ್, ಮಂಡ್ಯ	99450.00	277500.00
15.		ಸಿಸಿ ಕ್ಯಾಮರಾಗಳು		78600.00	
16.	1901913539 13/11/19	ಸಿಸಿ ಕ್ಯಾಮರಾಗಳು		99450.00	
17.	1901684048 24/09/2019	ಕೆನಾನ್ ಜೆರಾಕ್ಸ್ ಯಂತ್ರ	ಮೆ: ಶ್ರೀ ಸರ್ವೀಸ್, ಮತ್ತಿಕೆರೆ, ಬೆಂಗಳೂರು	77502.00	387510.00
18.		ಕೆನಾನ್ ಜೆರಾಕ್ಸ್ ಯಂತ್ರ		77502.00	
19.	1901684031 24/09/2019	ಕೆನಾನ್ ಜೆರಾಕ್ಸ್ ಯಂತ್ರ		77502.00	
20.	1903387807 27/03/2020	4 ಚಕ್ರದ ವಾಹನಗಳಿಗೆ ಜಿ.ಪಿ.ಎಸ್. (ಒಟ್ಟು 78 ಜಿಪಿಎಸ್‌ಗಳ ಖರೀದಿ)	–	95827x13	1245751.00
21.	1902037672 3.12.2019	02 ಸಂ. ರಿಕೋ ಜೆರಾಕ್ಸ್	ಮೆ: ಸುಮುಖ ಆಫೀಸ್	186258.00	368976.00

			ಸಲ್ಯೂಷನ್ಸ್, ಮೈಸೂರು		
22.	1902037707 3.12.2019	–"–	–"–	182718.00	
23.	1903392544 27.03.2020	06 Nos - 3 KVA Hybrid Solar Power Pack, Solar Voltic module Bank-2	ಮೆ: ಪದ್ಮ ಎಂಟರ್ ಪ್ರೈಸಸ್, ಕೋಲಾರ	99945x06	599670.00
24.	1902085542 09.12.2019	02 Nos - 3 KVA Hybrid Solar Power Pack, Solar Voltic module Bank-2	ಮೆ: ಪದ್ಮ ಎಂಟರ್ ಪ್ರೈಸಸ್, ಕೋಲಾರ	99945x02	199890.00
				Total Rs.	7862047.00

19/8/21

(ಸೀಮಾ ಲಾಟ್ಕರ್, ಐ.ಪಿ.ಎಸ್.),
ಎ.ಐ.ಜಿ.ಪಿ. (ಅಪರಾಧ) ಮತ್ತು
ಡಿ.ಐ.ಜಿ.ಪಿ.(ಕೇಂದ್ರಸ್ಥಾನ–2), (ಪ್ರಭಾರ)
ಮಹಾನಿರ್ದೇಶಕರು ಮತ್ತು ಪೊಲೀಸ್
ಮಹಾನಿರೀಕ್ಷಕರುರವರ ಪರವಾಗಿ.

19/8/21 19/8/21 19/8/21

(9)

ಕರ್ನಾಟಕ ಸರ್ಕಾರ
(ಪೊಲೀಸ್ ಇಲಾಖೆ)

ಸಂಖ್ಯೆ: ಲೆಪದ-10/162/ಈ.ವಿ/2022-23

ಲಿಡಕಿ- ಮಾನಾಲ ೨೨ ಪ್ರತಿಗ್ಳನ್ನು/
ಈ ಪತ್ರವೆಂದಿಗೆ ಲಗತ್ತಿಸಿದೆ.

ಡೈರೆಕ್ಟರ್ ಜನರಲ್ ಮತ್ತು ಇನ್ಸ್‌ಪೆಕ್ಟರ್
ಜನರಲ್ ಆಫ್ ಪೊಲೀಸ್ ರವರ ಕಛೇರಿ
ಕರ್ನಾಟಕ ರಾಜ್ಯ ಬೆಂಗಳೂರು
ದಿನಾಂಕ: 04.05.2023.

ಇವರಿಗೆ,

ಉಪ ಪೊಲೀಸ್ ಆಯುಕ್ತರು,
ಈಶಾನ್ಯ ವಿಭಾಗ,
ಬೆಂಗಳೂರು.

ಮಾನ್ಯರೇ,

ವಿಷಯ:- ಉಪ ಪೊಲೀಸ್ ಆಯುಕ್ತರು, ಈಶಾನ್ಯ ವಿಭಾಗ, ಬೆಂಗಳೂರು ರವರ ಕಛೇರಿಯ ದಿ: 01.04.2017 ರಿಂದ 31.03.2022ರ (05 ವರ್ಷಗಳು) ಆರ್ಥಿಕ ವರ್ಷದ ಅವಧಿಗೆ ಸಂಬಂಧಿಸಿದ ಲೆಕ್ಕಪರಿಶೋಧನಾ ವರದಿಯ ಬಗ್ಗೆ.

ಉಲ್ಲೇಖ:- ಪೊಲೀಸ್ ಪ್ರಧಾನ ಕಛೇರಿಯ ಜ್ಞಾಪನ ಪತ್ರ ಸಂಖ್ಯೆ:ಲೆಪದ/01/2022-23, ದಿನಾಂಕ: 17/10/2022.

* * *

ಪ್ರಧಾನ ಕಛೇರಿ ಲೆಕ್ಕ ಪರಿಶೋಧಕರು ತಮ್ಮ ಕಛೇರಿಯ ದಿನಾಂಕ: 01.04.2017 ರಿಂದ 31.03.2022ರ ಅವಧಿಯ ಲೆಕ್ಕ ಪರಿಶೋಧನೆಯನ್ನು ಕೈಗೊಂಡಿದ್ದು, ತತ್ಸಂಬಂಧದ ಲೆಕ್ಕ ಪರಿಶೋಧನಾ ವರದಿಯನ್ನು ಇದರೊಂದಿಗೆ ಲಗತ್ತಿಸಿ ಕಳುಹಿಸಿದೆ. ಸದರಿ ವರದಿಯಲ್ಲಿ ತಿಳಿಸಿರುವಂತೆ ಸೂಕ್ತ ಕ್ರಮ ಕೈಗೊಂಡು ಪಾಲನಾ ವರದಿಯನ್ನು 30 ದಿವಸಗಳೊಳಗಾಗಿ ಈ ಕಛೇರಿಗೆ ಕಳುಹಿಸಿಕೊಡಲು ಕೋರಿದೆ.

ತಮ್ಮ ವಿಶ್ವಾಸಿ

4/5/23

(ವಸ್ ಜೀವಣ್ಣ)
ಜಂಟಿ ನಿಯಂತ್ರಕರು (ಹಣಕಾಸು),
ಮಹಾನಿರ್ದೇಶಕರು ಮತ್ತು ಪೊಲೀಸ್
ಮಹಾನಿರೀಕ್ಷಕರುರವರ ಪರವಾಗಿ.

03/5/23

ಪ್ರತಿಯನ್ನು:-

ಪೊಲೀಸ್ ಆಯುಕ್ತರು, ಬೆಂಗಳೂರು ನಗರರವರಿಗೆ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.

ರವಾನಿಸಲಾಗಿದೆ
04 MAY 2023

ಉಪ ಪೊಲೀಸ್ ಆಯುಕ್ತರು, ಈಶಾನ್ಯ ವಿಭಾಗ, ಬೆಂಗಳೂರು ರವರ ಕಛೇರಿಯ ದಿ: 01.04.2017 ರಿಂದ 31.03.2022ರ (05 ಆರ್ಥಿಕ ವರ್ಷ) ಅವಧಿಗೆ ಸಂಬಂಧಿಸಿದ ಲೆಕ್ಕ ಪರಿಶೋಧನಾ ವರದಿಯಲ್ಲಿ ಆಕ್ಷೇಪಣೆಯಲ್ಲಿಡಲಾದ ಮತ್ತು ವಸೂಲಾತಿಗೆ ಸೂಚಿಸಿರುವ ವಿವರಣಾ ಪಟ್ಟಿ.

ಕ್ರ. ಸಂ	ಕಂಡಿಕೆ ಸಂಖ್ಯೆ	ವಿವರಗಳು	ಆಕ್ಷೇಪಣೆಯಲ್ಲಿಡಲಾದ ಮೊತ್ತ ರೂ.	ವಸೂಲಾತಿಗೆ ಸೂಚಿಸಲಾದ ಮೊತ್ತ ರೂ.
1.	1	ನಗದು ಪುಸ್ತಕ ಪರಿಶೀಲನೆ ಬಗ್ಗೆ.	ಎ) 7,175 ಬಿ) 3,57,002	00.00
2.	2	ಖಾಯಂ ಮುಂಗಡ ಹಣದ ಬಗ್ಗೆ.	49,401	00.00
3.	3	ಉಳಿತಾಯ ಖಾತೆಗೆ ಬಂದ ಬಡ್ಡಿ ಹಣದ ವಿವರ	89,435	00.00
4.	4	ಭದ್ರತಾ ಠೇವಣಿಯನ್ನು ನಿರ್ವಹಿಸದೇ ಇರುವ ಬಗ್ಗೆ	2000	00
5.	5	ವೇತನ ಶ್ರೇಣಿಗೆ ಅನುಗುಣವಾಗಿ ಕನಿಷ್ಠ ಕೆ.ಜಿ.ಐ.ಡಿ ವಂತಿಕೆ ಕಟಾವು ಮಾಡಿಸದೆ ಇರುವ ಬಗ್ಗೆ.	00	00
6.	6	ಮಾಜಿ ಸೈನಿಕರ ವೇತನ ನಿಗಧಿ ಪಡಿಸಿರುವ ಕುರಿತು.	00	00
7.	7	ಪತ್ತಾಂಕಿತ ರಜಾ ದಿನಗಳಲ್ಲಿ ಕರ್ತವ್ಯ ನಿರ್ವಹಿಸದ ಅಧಿಕಾರಿ/ಸಿಬ್ಬಂದಿಗಳಿಗೆ ವೇತನವನ್ನು ಮಂಜೂರು ಮಾಡಿರುವ ಬಗ್ಗೆ.	00	54,725
8.	8	ಸಂಗ್ರಹ ಮತ್ತು ದಾಸ್ತಾನುಗಳ ಭೌತಿಕ ಪರಿಶೀಲನೆಯನ್ನು ಕೈಗೊಳ್ಳುವ ಬಗ್ಗೆ	00.00	00.00
9.	9	ಹಳೆಯ ದಿನಪತ್ರಿಕೆಗಳನ್ನು ವಿಲೇವಾರಿ ಮಾಡುವ ಬಗ್ಗೆ	00.00	00.00
10.	10	ನಿರುಪಯುಕ್ತಗೊಳಿಸಲಾದ ಪೀಠೋಪಕರಣ, ಎಲೆಕ್ಟ್ರಾನಿಕ್ಸ್ ವಸ್ತುಗಳು ಹಾಗೂ ಕಂಪ್ಯೂಟರ್ ಬಿಡಿಭಾಗಗಳ ವಿಲೇವಾರಿ ಕುರಿತು.	00.00	00.00
11.	11	ಸರ್ಕಾರಿ ಆದೇಶದನ್ವಯ ಠಾಣೆಗಳಿಗೆ ಮಂಜೂರಿಸಿ ಪಾವತಿಸಲಾಗುವ ಒ.ಪಿ.ಎಸ್. ಚಾರ್ಜಸ್ ಕುರಿತು.	00.00	1,78,990
12.	12	ಸಾರ್ವಜನಿಕರಿಂದ ಸಂಗ್ರಹಿಸಲಾದ ಕೋಟ್ಯಾ ಮೊತ್ತವನ್ನು ಲೆಕ್ಕ ಸಮನ್ವಯಗೊಳಿಸುವ ಬಗ್ಗೆ	00.00	00.00
13.	13	ಹೆಚ್ಚುವರಿಯಾಗಿ ಸಿಯುಜಿ ಮೊಬೈಲ್ ಅನ್ನು ಉಪಯೋಗಿಸಿರುವ ಬಗ್ಗೆ	00.00	25,846
14.	14	ತಮಿಳುನಾಡು ಸಾರಿಗೆ ಸಂಸ್ಥೆಯ ಬಸ್ ವಾರೆಂಟ್‌ಗಳ ಕುರಿತು	471	00.00
15.	15	ಕೆ.ಎಸ್.ಆರ್.ಟಿ.ಸಿ ಬಸ್‌ಗೆ ಬಾಡಿಗೆ ಮೊತ್ತ ಪಾವತಿಸಿರುವ ಕುರಿತು	11,950	00.00
16.	16	1) ಕೆ.ಟಿ. ಕೆ.ಟಿ.ಪಿ.ಪಿ ನಿಯಮ-1999 ಮತ್ತು ನಿಯಮ 2000 ಅನ್ನು ಉಲ್ಲಂಘಿಸಿ, ಕಛೇರಿಯ ದೈನಂದಿನ ಕರ್ತವ್ಯಕ್ಕೆ ಸಾಮಾಗ್ರಿಗಳನ್ನು ಖರೀದಿಸಿದ ಬಗ್ಗೆ.	7,42,097	00.00
		2) RAPID ANTIGEN KITS ಗಳನ್ನು ಖರೀದಿಸಿರುವ ಬಗ್ಗೆ.	5,76,000	00.00
		3) ಕೋವಿಡ್-19ರ ಪ್ರಯುಕ್ತ ಪಾಸ್‌ಗಳನ್ನು ಮುದ್ರಿಸಿರುವ ಬಗ್ಗೆ	6,28,040	00.00
		4) ಸಾಮೂಹಿಕ ಗಣೇಶೋತ್ಸವ ಸಂಬಂಧ ಸಿ.ಸಿ ಕ್ಯಾಮೆರಾ	2,95,400	00.00

		ಮತ್ತು ಡ್ರೋಣ್ ಕ್ಯಾಮರಾಗಳನ್ನು ಬಾಡಿಗೆಗೆ ಪಡೆದ ಬಗ್ಗೆ.		00.00
		5) ಕೆ.ಟಿ.ಪಿ.ಪಿ ಕಾಯ್ದೆ-1999 ಮತ್ತು ನಿಯಮ 2000ನ್ನು ಉಲ್ಲಂಘಿಸಿ, ಘಟಕಕ್ಕೆ ಸಾಮಾಗ್ರಿಗಳನ್ನು ಖರೀದಿಸಿರುವ ಬಗ್ಗೆ.	29,91,709	
17.	17	ವಿಧಾನಸಭಾ ಚುನಾವಣೆ-2018ರ ಚುನಾವಣಾ ಕರ್ತವ್ಯಕ್ಕೆ ಹಾಜರಾಗಿದ್ದ ಆರ್.ಎ.ಎಫ್ ತಂಡದ ಅಧಿಕಾರಿಗಳು ತಂಗಿದ್ದ LULU HOSPITALITY Near Gold Summith Apartment ಗೆ, ಬಾಡಿಗೆ ಮೊತ್ತ ಪಾವತಿಸಿರುವ ಬಗ್ಗೆ.	1,05,280	00.00
18.	18	ಹೊಸ ಬ್ಯಾಟರಿಗಳನ್ನು ಖರೀದಿಸಿರುವ ಬಗ್ಗೆ.	2,65,977	00.00
19.	19	ಪೊಲೀಸ್ ಠಾಣೆಗಳಿಗೆ ಜೆರಾಕ್ಸ್ ಯಂತ್ರಗಳನ್ನು ಖರೀದಿಸಿರುವ ಬಗ್ಗೆ.	3,70,048	00.00
20.	20	ಜೆರಾಕ್ಸ್ ಯಂತ್ರಗಳ ವಾರ್ಷಿಕ ನಿರ್ವಹಣೆಯ ಬಗ್ಗೆ.	2,23,020	00.00
21.	21	ಪೀಠೋಪಕರಣಗಳನ್ನು ಖರೀದಿಸಿರುವ ಬಗ್ಗೆ.	6,64,556	00.00
22.	22	ಲೇಖನ ಸಾಮಾಗ್ರಿಗಳನ್ನು ಖರಿದಿಸಿರುವ ಬಗ್ಗೆ.	28,25,037	00.00
23.	23	HP LASER JET MODEL M1005 MFP ALL IN ONE PRINTER ಖರೀದಿಸಿರುವ ಬಗ್ಗೆ	76,910	00.00
24.	24	ಯಲಹಂಕ ಹಾಗೂ ವಿದ್ಯಾರಣ್ಯಪುರ ಪೊಲೀಸ್ ಠಾಣೆಗಳಿಗೆ ದಿನಾಂಕ: 08/09/2019ರಂದು ಗಣೇಶ ಬಂದೋಬಸ್ತ್ ಸಂಬಂಧ ಸಿಸಿಟಿವಿ ಕ್ಯಾಮೆರಾಗಳನ್ನು ಅಳವಡಿಸಿರುವ ಬಗ್ಗೆ.	1,49,900	00.00
25.	25	ದಿ:22/09/2019ರಂದು ವಿದ್ಯಾರಣ್ಯಪುರ ಪೊಲೀಸ್ ಠಾಣೆರವರು ಸಾಮೂಹಿಕ ಗಣೇಶೋತ್ಸವ ಸಂಬಂಧ ಪೂರ್ವಬಾವಿಯಾಗಿ ಏರ್ಪಡಿಸಲಾಗಿದ್ದ ಬಂದೋಬಸ್ತ್‌ಗೆ ಶಾಮಿಯಾನ ಛೇರ್, ಮೈಕ್ ವ್ಯವಸ್ಥೆ ಮಾಡಿಸಿದ ಬಗ್ಗೆ.	00.00	72,511
26.	26	ಕನ್ನಡ ಭಾಷಾ ವಿನಾಯಿತಿ ಪ್ರಮಾಣ ಪತ್ರ ಘೋಷಿಸದೇ ಸೇವಾ ಪುಸ್ತಕದಲ್ಲಿ ನಮೂದಿಸದೇ ಇರುವ ಬಗ್ಗೆ.	00.00	00.00
27.	27	ವಾಹನ ಸಂಖ್ಯೆ: ಕೆಎ-04-ಜಿ-722 ಇನೋವಾ ವಾಹನದ ಅಪಘಾತ ವಿಷಯ ಕುರಿತು.	68,920	00.00
28.	28	ವಾಹನಗಳ ಇಂಧನ ಕುರಿತು	00.00	14,800
29.	29	2018ರ ವಿಧಾನ ಸಬಾ ಚುನಾವಣೆ ಪ್ರಯುಕ್ತ ಖಾಸಗಿ ವಾಹನಗಳನ್ನು ಬಾಡಿಗೆಗೆ ಪಡೆದಿರುವ ಬಗ್ಗೆ.	5,40,309	00.00
30.	30	ಆಹಾರ ಭತ್ಯೆ ಕುರಿತು.	64,73,447	00.00
31.	31	ಬಂದೋಬಸ್ತ್ ವೆಚ್ಚ ಕುರಿತು.	00.00	00.00
32.	32	ಹೆಚ್ಚುವರಿಯಾಗಿ ಕಂದಾಯ ಇಲಾಖೆಗೆ ಪಾವತಿಸಿರುವ ತೆರಿಗೆಯನ್ನು ಹೊಂದಾಣಿಕೆ ಮಾಡಿ ಕೊಡುವ ಬಗ್ಗೆ.	10,86,339	00.00
33.	33	ಕೊಡಿಗೆಹಳ್ಳಿ ಪೊಲೀಸ್ ಠಾಣಾ ಕಟ್ಟಡದ ಕರಾರು ಪತ್ರ ನವೀಕರಣದ ಬಗ್ಗೆ	00.00	00.00
34.	34	ಘಟಕದ ಅಧೀನದಲ್ಲಿರುವ ಸಿ.ಇ.ಎನ್ ಪೊಲೀಸ್ ಠಾಣೆಯ ಕಟ್ಟಡಕ್ಕೆ ಸಂಬಂಧಿಸಿದ ಬಗ್ಗೆ.	00.00	00.00

35.	35	ವಾಹನ ಸಾರಿಗೆ (ಎಂ.ಟಿ.) ವಾಹನಗಳ ದುರಸ್ಥಿ ಬಿಲ್ಲುಗಳಲ್ಲಿ ಆದಾಯ ತೆರಿಗೆಯನ್ನು ಕಡಿತಗೊಳಿಸದೇ ಇರುವ ಬಗ್ಗೆ.	00.00	8,569/-
36.	36	ಸೇವಾ ಪುಸ್ತಕಗಳ ಕುರಿತು	00.00	00.00
37.	37	ವೈದ್ಯಕೀಯ ವೆಚ್ಚ ಮರುಪಾವತಿಯ ಬಗ್ಗೆ	45,82,842/-	00.00
38.	38	ದಾಖಲಾತಿಗಳನ್ನು ಒದಗಿಸದೇ ಇರುವ ಬಗ್ಗೆ.	00.00	00.00
39.	39	ಮನೆ ಬಾಡಿಗೆ ಭತ್ಯೆ ಮತ್ತು ನಗರ ಪರಿಹಾರ ಭತ್ಯೆ ಬಗ್ಗೆ.	00.00	00.00
40.	40	ಪ್ರಯಾಣ ಭತ್ಯೆಯ ಅನುದಾನದ ರಿಜಿಸ್ಟರನ್ನು ನಿರ್ವಹಿಸದೇ ಇರುವ ಬಗ್ಗೆ.	00.00	00.00
41.	41	ಪ್ರಯಾಣ ಭತ್ಯೆಗಳ ಬಿಲ್ಲುಗಳನ್ನು ಪರಿಶೀಲಿಸುವ ಹಾಗೂ ಮಂಜೂರಾತಿ ನೀಡುವ ವಿಧಾನ ಕುರಿತು	00.00	00.00
42.	42	ಪೊಲೀಸ್ ಠಾಣೆಗಳ ಬಗ್ಗೆ.	00.00	00.00
43.	43	ತನಿಖಾ ವೆಚ್ಚದ ಬಗ್ಗೆ.	00.00	00.00
		ಒಟ್ಟು ಮೊತ್ತ ರೂ.	2,31,83,265/-	3,55,441/-

4/5/23

(ಎಸ್.ರೇವಣ್ಣ),
ಜಂಟಿ ನಿಯಂತ್ರಕರು (ಹಣಕಾಸು),
ಮಹಾನಿರ್ದೇಶಕರು ಮತ್ತು ಪೊಲೀಸ್
ಮಹಾನಿರೀಕ್ಷಕರುರವರ ಪರವಾಗಿ.

05/05/23

3) ಈ ಹಿಂದಿನ ಕ್ಯಾಮೆರಾಗಳು ಹಾಳಾಗಿದ್ದಲ್ಲಿ ಸದರಿ ಕ್ಯಾಮೆರಾಗಳನ್ನು ಬೈ-ಬ್ಯಾಕ್ ಮಾಡಿ ಹೊಸ ಸಿಸಿ ಕ್ಯಾಮೆರಾಗಳನ್ನು ಖರೀದಿಸಿರುವ ಬಗ್ಗೆ ದಾಖಲೆಗಳನ್ನು ಒದಗಿಸುವುದು. ಸಂಸ್ಥೆಯವರು ಮೇಲ್ಕಂಡ ಉಪಕರಣಗಳನ್ನು ಸರಬರಾಜು ಮಾಡಲಾದ/ಸ್ವೀಕರಿಸಿದ ದಿನಾಂಕ.

4) ಸದರಿ ಸಂಸ್ಥೆಗೆ ಹಣವನ್ನು ಪಾವತಿಸಿದ ದಿನಾಂಕದ ವಿವರ.

5) ಸದರಿ PRINI POWER SOLUTION , BANGALURU- ಸಂಸ್ಥೆಯವರು ಅಧಿಕೃತ ಸಂಸ್ಥೆಯವರೆ?

6) ಜೆಮ್ಸ್‌ಪೋರ್ಟಲ್‌ನಲ್ಲಿ ಖರೀದಿಸದೇ ಇರಲು ಕಾರಣವೇನು? ವಿವರ/ದಾಖಲಾತಿಗಳನ್ನು ಒದಗಿಸುವುದು.

ಕಂಡಿಕೆ : 19 - ಪೊಲೀಸ್ ಠಾಣೆಗಳಿಗೆ ಜೆರಾಕ್ಸ್ ಯಂತ್ರಗಳನ್ನು ಖರೀದಿಸಿರುವ ಬಗ್ಗೆ.

ಘಟಕದಲ್ಲಿ 2017 ರಿಂದ 2022ನೇ ಸಾಲಿನ ವರೆವಿಗೂ ಆಂತರಿಕ ಲೆಕ್ಕ ಪರಿಶೋಧನೆಯನ್ನು ಕೈಗೊಂಡಿದ್ದು, ಈ ಸಂಬಂಧ ಘಟಕದಲ್ಲಿ ಸಾಮಾನ್ಯ ವೆಚ್ಚದಡಿಯಲ್ಲಿ ನಿರ್ವಹಿಸಲಾದ ಕಡತಗಳು ಮತ್ತು ಬಿಲ್ಲುಗಳನ್ನು ಪರಿಶೀಲಿಸಲಾಗಿ, ಪೊಲೀಸ್ ಠಾಣೆಗಳಿಗೆ ಜೆರಾಕ್ಸ್ ಯಂತ್ರಗಳನ್ನು ಖರೀದಿಸಿರುವುದು ಕಂಡುಬಂದಿರುತ್ತದೆ. ವಿವರಗಳು ಈ ಕೆಳಕಂಡಂತಿರುತ್ತದೆ.

ಕ್ರ. ಸಂ	ವಿವರ	ಸಂಸ್ಥೆಯ ಹೆಸರು	ಬಿಲ್ ಇನ್‌ವೈಸ್ ನಂ ಮತ್ತು ದಿನಾಂಕ:	ಆದೇಶ ಸಂಖ್ಯೆ ಮತ್ತು ದಿನಾಂಕ	ಮಂಜೂರಾತಿ ಮೊತ್ತ
01	ಜೆರಾಕ್ಸ್ ಯಂತ್ರಗಳನ್ನು ಖರೀದಿಸಿರುವ	G.N.ENTER PRISES, BANGALURU-560019	0148, DATE: 09/12/2018	08/ಸಂಗ್ರಹ(1)/ಡಿಸಿಪಿ(ಈ)/2018-19, ದಿನಾಂಕ:-.	90624.00
02			0148, DATE: 08/10/2018	09/ಸಂಗ್ರಹ(1)/ಡಿಸಿಪಿ(ಈ)/2018-19, ದಿನಾಂಕ:-.	90624.00
03			0068, DATE: 28/03/2018	01/ಸಂಗ್ರಹ/ಡಿಸಿಪಿ(ಈ)/2018-19, ದಿನಾಂಕ:-.-/09/2018.	47200.00
04			0073, DATE: 31/03/2018	01/ಸಂಗ್ರಹ/ಡಿಸಿಪಿ(ಈ)/2018-19, ದಿನಾಂಕ:-.-/09/2018.	47200.00
05			0069, DATE: 28/03/2018	01/ಸಂಗ್ರಹ/ಡಿಸಿಪಿ(ಈ)/2018-19, ದಿನಾಂಕ:-.-/09/2018.	47200.00
06			0072, DATE: 31/03/2018	01/ಸಂಗ್ರಹ/ಡಿಸಿಪಿ(ಈ)/2018-19, ದಿನಾಂಕ:-.-/09/2018.	47200.00
				ಒಟ್ಟು ಮೊತ್ತ ರೂ.	3,70,048.00

- ಮೇಲ್ಕಂಡ ಜೆರಾಕ್ಸ್ ಯಂತ್ರಗಳನ್ನು ಕೋಟೆಷನ್ ಮುಖಾಂತರ ಒಂದೇ ತಿಂಗಳಿನಲ್ಲಿ ಒಂದೇ ಸಂಸ್ಥೆಯಿಂದ ಖರೀದಿಸುವುದು ನಿಯಮಬಾಹಿರವಾಗಿರುತ್ತದೆ. 1.00 ಲಕ್ಷ ಮೊತ್ತ ಮೀರಿದ ಖರೀದಿಗಳನ್ನು ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಖರೀದಿಸಬೇಕಾಗಿರುತ್ತದೆ. ಆದರೆ ಕೋಟೇಷನ್ ಮುಖಾಂತರ ಖರೀದಿಸಿರುವುದು ಕೆ.ಟಿ.ಟಿ.ಪಿ. ಕಾಯ್ದೆಯನ್ನು ಮತ್ತು ಸುತ್ತೋಲೆ / ಸರ್ಕಾರದ ಆದೇಶಗಳನ್ನು ಉಲ್ಲಂಘನೆ ಮಾಡಿರುವುದು ಲೆಕ್ಕಪರಿಶೋಧನೆಯಲ್ಲಿ ಸಾಬೀತಾಗಿರುತ್ತದೆ. ಕೆ.ಟಿ.ಟಿ.ಪಿ. ಅಧಿನಿಯಮವನ್ನು ಉಲ್ಲಂಘಿಸಿ, ವೆಚ್ಚ ಭರಿಸಿರುವ ಬಗ್ಗೆ ವಿವರಣೆಯನ್ನು ನೀಡುವುದು.
- ಕಛೇರಿಯ ಕೆಲಸ-ಕಾರ್ಯಗಳಿಗೆ ಬೇಕಾದ ಜೆರಾಕ್ಸ್ ಯಂತ್ರಗಳನ್ನು ಇದೇ ಮೊದಲ ಬಾರಿಗೆ ಡಿಸಿಪಿ ಕಛೇರಿಗೆ ಖರೀದಿ ಮಾಡದೆ ಈ ಮೊದಲೇ ಖರೀದಿ ಮಾಡಿ ಎಲ್ಲಾ ಪೊಲೀಸ್ ಠಾಣೆ, ಕಛೇರಿ ಹಾಗೂ ಡಿಸಿಪಿ ಕಛೇರಿಯ ವಿವಿಧ ವಿಭಾಗಗಳಿಗೆ ಹಂಚಿಕೆ ಮಾಡಲಾಗಿರುತ್ತದೆ. ಸದರಿ ಖರೀದಿ ವ್ಯವಹಾರವನ್ನು ಖರೀದಿ ಪೂರ್ವದಲ್ಲಿ ತಮ್ಮ ನಿಯಂತ್ರಾಧಿಕಾರಿಗಳ ಗಮನಕ್ಕೆ ತಂದು ಅವರಿಂದ ಆಡಳಿತಾತ್ಮಕ ಅನುಮೋದನೆಯನ್ನು ಪಡೆದುಕೊಂಡ ನಂತರ ನಿಯಮಾನುಸಾರ ಖರೀದಿ ಮಾಡಬೇಕಾಗಿತ್ತು. ಹಾಗೆಯೇ ಮಂಜೂರಾತಿ ಆದೇಶದಲ್ಲಿ

ವೆರಾಕ್ಸ್ ಯಂತ್ರಗಳ ಆಗತ್ಯತೆ ಈ ಮೊದಲು ಖರೀದಿಸಿ ಉಪಯೋಗಿಸಲಾಗುತ್ತಿದ್ದ ವೆರಾಕ್ಸ್ ಯಂತ್ರಗಳ ನ್ಯೂನತೆ ಕುರಿತು ವಿವರಣೆ ಹಾಗೂ ಪುಟಕಾಧಿಕಾರಿಗಳ ಬೇಡಿಕೆ ವಿನಂತಿಯು ಪ್ರಾಸ್ತಾವನೆ ಭಾಗದಲ್ಲಿ ವಿವರಿಸಬೇಕಾಗಿದ್ದು, ವಿವರಿಸಿರುವುದಿಲ್ಲ.

- ಹಾಗೆಯೇ ವೆರಾಕ್ಸ್ ಯಂತ್ರಗಳ ಸ್ಥಿತಿಗತಿ ಕುರಿತು ಅವಲೋಕನವನ್ನು ಏನು ಮಾಡಲಾಯಿತು, ಅನುಪಯುಕ್ತಗೊಳಿಸಲಾಗಿದೆಯೇ? ಬೈ-ಬ್ಯಾಕ್ ಮಾಡಲಾಗಿದೆಯೇ? ಎಂಬುದರ ಕುರಿತು ಯಾವುದೇ ಮಾಹಿತಿ ಇರುವುದಿಲ್ಲ.
- ಆಧ್ಯರಿಂದ ಈ ಎಲ್ಲಾ ಅಂಶಗಳಿಗೆ ಸಮರ್ಪಕ ವಿವರಣೆಗಳನ್ನು ಒದಗಿಸುವುದು. ಅಲ್ಲಿಯವರೆವಿಗೂ ಒಟ್ಟು ಮೊತ್ತ ರೂ. 3,70,048.00ಗಳನ್ನು ಆಕ್ಷೇಪಣೆಯಲ್ಲಿರಿಸಲಾಗಿದೆ.

ಕಂಡಿಕೆ : 20 - ವೆರಾಕ್ಸ್ ಯಂತ್ರಗಳ ವಾರ್ಷಿಕ ನಿರ್ವಹಣೆಯ ಬಗ್ಗೆ.

ಸದರಿ ಪುಟಕದಲ್ಲಿರುವ 09 ಸಂಖ್ಯೆಯ ವಿವಿಧ ಮಾದರಿಯ ವೆರಾಕ್ಸ್ ಯಂತ್ರಗಳನ್ನು 2019-20ನೇ ಸಾಲಿನಲ್ಲಿ ದಿನಾಂಕ: 01/10/2019 ರಿಂದ 30/09/2020ರವರೆಗೆ 01 ವರ್ಷದ ಅವಧಿಗೆ ವಾರ್ಷಿಕ ನಿರ್ವಹಣೆಯನ್ನು ನೀಡುವ ಸಂಬಂಧ ಎಸ್‌ಎಸ್ ಇನ್ಫೋಟೆಕ್ ಬೆಂಗಳೂರು-560054 ರವರಿಗೆ ಕಾರ್ಯಾದೇಶ ನೀಡಿದ್ದು, ಆದರ ಒಟ್ಟು ಮೊತ್ತ ರೂ.2,23,020/-ಗಳಿಗೆ ಕಛೇರಿ ಆದೇಶ ಸಂಖ್ಯೆ: 11/ಸಂಗ್ರಹ(1)/ಡಿಸಿಪಿ(ಈ)/2019-20, ದಿ: 11-12/2019ರಲ್ಲಿ ಸದರಿ ಸಂಸ್ಥೆಗೆ ಮಂಜೂರಾತಿ ನೀಡಲಾಗಿರುತ್ತದೆ. ಆದರೆ, ಸದರಿ ಪುಟಕದಲ್ಲಿ ನಿರ್ವಹಿಸಲಾದ ಕಡತಗಳು ಬಿಲ್ಲುಗಳು ಹಾಗೂ ಇತರೆ ದಾಖಲಾತಿಗಳನ್ನು ಪರಿಶೀಲಿಸಲಾಗಿ, ಕಡತದಲ್ಲಿ ಯಾವುದೇ ಒಪ್ಪಂದದ ಕರಾರು ಪತ್ರ ಲಭ್ಯವಿರುವುದಿಲ್ಲ.

ರೂ.99,999/-ಗಳಿಗೂ ಮೇಲ್ಪಟ್ಟ ಖರೀದಿಗೆ ಸಂಬಂಧಿಸಿದಂತೆ, ಕೆ.ಟಿ.ಪಿ.ಪಿ ಕಾಯ್ದೆ-1999 ಮತ್ತು ನಿಯಮ 2000 ರನ್ವಯ ಇ-ಟೆಂಡರ್ ಪ್ರಕಟಣೆಯನ್ನು ನೀಡಿ, ಸ್ಪರ್ಧಾತ್ಮಕ ದರದಲ್ಲಿ ಸಾಮಾಗ್ರಿಗಳನ್ನು ಖರೀದಿಸಬೇಕಾಗಿದ್ದು, ಆದರ ಪುಟಕೆದಿಂದ ನಿಯಮವನ್ನು ಉಲ್ಲಂಘಿಸಿ ಇ-ಟೆಂಡರ್ ಪ್ರಕಟಣೆಯನ್ನು ನೀಡದೇ ಕೆ.ಟಿ.ಪಿ.ಪಿ ನಿಯಮವನ್ನು ತಪ್ಪಿಸುವ ಉದ್ದೇಶದಿಂದ ಒಂದು ಲಕ್ಷದ ಒಳಗೆ ಖರೀದಿ ಬಿಲ್ಲುಗಳನ್ನು ವಿಭಜಿಸಿ, ಎಸ್‌ಎಸ್ ಇನ್ಫೋಟೆಕ್, ಬೆಂಗಳೂರು ರೂ.99,999/-ಗಳಿಗೂ ಮೇಲ್ಪಟ್ಟ ಖರೀದಿಗೆ ನೀಡಿರುವುದು ಕಂಡು ಬಂದಿರುತ್ತದೆ. ಸದರಿ ಉಪಕರಣಗಳನ್ನು ಅಳವಡಿಸಿರುವ ಬಗ್ಗೆ ಮತ್ತು ಸದರಿ ವೆರಾಕ್ಸ್ ಯಂತ್ರ ವಾರ್ಷಿಕ ನಿರ್ವಹಣೆ ಕಾರ್ಯನಿರ್ವಹಿಸಿರುವ ಬಗ್ಗೆ ಸಂಬಂಧಪಟ್ಟ ಅಧಿಕಾರಿಯವರಿಂದ ಉಪಯುಕ್ತತಾ ಪ್ರಮಾಣ ಪತ್ರಗಳನ್ನು ಪಡೆದಿರುವ ಬಗ್ಗೆ, ಕೂಡಲೇ ಕ್ರಮ ಕೈಗೊಂಡು ಸೂಕ್ತ ಧೃಡೀಕೃತ ದಾಖಲಾತಿಗಳೊಂದಿಗೆ ಪಾಲನಾ ವರದಿ ಸಲ್ಲಿಸುವುದು. ಅಲ್ಲಿಯವರೆವಿಗೂ ರೂ. 2,23,020/- ಆಕ್ಷೇಪಣೆಯಲ್ಲಿಡಲಾಗಿದೆ.

ಕಂಡಿಕೆ : 21 - ಉಡೋಪಕರಣಗಳನ್ನು ಖರೀದಿಸಿರುವ ಬಗ್ಗೆ.

ಪುಟಕದಲ್ಲಿ ಸಾಮಾನ್ಯ ವೆಚ್ಚದಡಿಯಲ್ಲಿ ನಿರ್ವಹಿಸಲಾದ ಕಡತಗಳು ಮತ್ತು ಬಿಲ್ಲುಗಳನ್ನು ಪರಿಶೀಲಿಸಲಾಗಿ, ಕಛೇರಿಗೆ ಸಂಬಂಧಿಸಿದಂತೆ ಉಡೋಪಕರಣಗಳನ್ನು ಖರೀದಿಸಿರುವುದು ಕಂಡುಬಂದಿರುತ್ತದೆ. ವಿವರಗಳು ಈ ಕೆಳಕಂಡಂತಿರುತ್ತದೆ.

ಕ್ರ. ಸಂ	ವಿವರ	ಸಂಸ್ಥೆಯ ಹೆಸರು	ಬಿಲ್ ಇನ್‌ವೈಸ್ ನಂ ಮತ್ತು ದಿನಾಂಕ.	ಮಂಜೂರಾತಿ ಮೊತ್ತ	ಒಟ್ಟು ಮೊತ್ತ
01	ಉಡೋಪಕರಣಗಳನ್ನು ಖರೀದಿಸಿರುವ ಬಗ್ಗೆ	CHERRY PICK, BANGALORE-560095	381, DATE: 26/03/2019	51920.00	
02			377, DATE: 26/03/2019	91500.00	
03			378, DATE: 26/03/2019	91500.00	
04			380, DATE: 26/03/2019	78120.00	
05			379, DATE: 26/03/2019	86960.00	
			ಒಟ್ಟು ಮೊತ್ತ ರೂ.	4,00,000.00	4,00,000.00

(10)

2019-22

114

ಸಂಖ್ಯೆ: ಲೆಪದ-II/143/2022-23.

ಡೈರೆಕ್ಟರ್ ಜನರಲ್ ಮತ್ತು ಇನ್ಸ್‌ಪೆಕ್ಟರ್
ಜನರಲ್ ಆಫ್ ಪೊಲೀಸ್ ರವರ ಕಛೇರಿ,
ಕರ್ನಾಟಕ ರಾಜ್ಯ ಬೆಂಗಳೂರು.
ದಿನಾಂಕ: 11 .04.2023.

ಇವರಿಗೆ,

ಉಪ ಪೊಲೀಸ್ ಆಯುಕ್ತರು,
ಸಂಚಾರ ಪೂರ್ವ ವಿಭಾಗ,
ಬೆಂಗಳೂರು ನಗರ.

ಮಾನ್ಯರೆ,

ವಿಷಯ:- ಉಪ ಪೊಲೀಸ್ ಆಯುಕ್ತರು, ಸಂಚಾರ ಪೂರ್ವ ವಿಭಾಗ, ಬೆಂಗಳೂರು ನಗರ ರವರ ಘಟಕದ ದಿ: 01.04.2019 ರಿಂದ 31.03.2022ರ (03 ಆರ್ಥಿಕ ವರ್ಷ) ಅವಧಿಗೆ ಸಂಬಂಧಿಸಿದ ಲೆಕ್ಕಪರಿಶೋಧನಾ ವರದಿ ಬಗ್ಗೆ.

ಉಲ್ಲೇಖ:- ಪೊಲೀಸ್ ಪ್ರಧಾನ ಕಛೇರಿಯ ಜ್ಞಾಪನ ಪತ್ರ ಸಂಖ್ಯೆ:ಲೆಪದ-1/01/2022-23, ದಿನಾಂಕ: 13.04.2022 ಮತ್ತು 12.10.2022

* * *

ಪ್ರಧಾನ ಕಛೇರಿ ಲೆಕ್ಕ ಪರಿಶೋಧಕರು ತಮ್ಮ ಘಟಕದ ದಿನಾಂಕ: 01.04.2019 ರಿಂದ 31.03.2022ರ ಅವಧಿಯ ಲೆಕ್ಕ ಪರಿಶೋಧನೆಯನ್ನು ಕೈಗೊಂಡಿದ್ದು, ತತ್ಸಂಬಂಧದ ಲೆಕ್ಕ ಪರಿಶೋಧನಾ ವರದಿಯನ್ನು ಇದರೊಂದಿಗೆ ಲಗತ್ತಿಸಿ ಕಳುಹಿಸಿದೆ. ಸದರಿ ವರದಿಯಲ್ಲಿ ತಿಳಿಸಿರುವಂತೆ ಸೂಕ್ತ ಕ್ರಮ ಕೈಗೊಂಡು, ದೃಢೀಕೃತ ದಾಖಲೆಗಳೊಂದಿಗೆ ಪಾಲನಾ ವರದಿಯನ್ನು 30 ದಿವಸಗಳೊಳಗಾಗಿ ಈ ಕಛೇರಿಗೆ ಕಳುಹಿಸಿಕೊಡಲು ಕೋರಿದೆ.

ತಮ್ಮ ವಿಶ್ವಾಸಿ,

(ಎಸ್.ರಮಣ್ಣ).
ಜಂಟಿ ನಿಯಂತ್ರಕ, (ಹಣಕಾಸು)
ಮಹಾನಿರ್ದೇಶಕರು ಮತ್ತು ಪೊಲೀಸ್
ಮಹಾನಿರೀಕ್ಷಕರುರವರ ಪರವಾಗಿ.

ಪ್ರತಿಯನ್ನು:-

ಪೊಲೀಸ್ ಆಯುಕ್ತರು, ಬೆಂಗಳೂರು ನಗರ ರವರಿಗೆ ಮಾಹಿತಿಗಾಗಿ.

ರವಾನಿಸಲಾಗಿದೆ
1
12 APR 2023

ಉಪ ಪೊಲೀಸ್ ಆಯುಕ್ತರು, ಸಂಚಾರ ಪೂರ್ವ ವಿಭಾಗ, ಬೆಂಗಳೂರು ನಗರ ರವರ ಘಟಕದ ದಿನಾಂಕ: 01.04.2019 ರಿಂದ 31.03.2022 (03 ಆರ್ಥಿಕ ವರ್ಷ) ಅವಧಿಗೆ ಸಂಬಂಧಿಸಿದ ಲೆಕ್ಕ ಪರಿಶೋಧನಾ ವರದಿಯಲ್ಲಿ ಆಕ್ಷೇಪಣೆಯಲ್ಲಿಡಲಾದ ಮತ್ತು ವಸೂಲಿ ಮಾಡಿ ಸರ್ಕಾರಕ್ಕೆ ಜಮಾ ಮಾಡಬೇಕಾದ ಮೊತ್ತದ ವಿವರಣಾ ಪಟ್ಟಿ

ಕ್ರ ಸ ಂ	ಕಂಡಿಕೆ ಸಂಖ್ಯೆ	ವಿವರಗಳು	ಆಕ್ಷೇಪಣೆಯಲ್ಲಿಡ ಲಾದ ಮೊತ್ತ ರೂ.	ವಸೂಲಾತಿಗೆ ಸೂಚಿಸಲಾದ ಮೊತ್ತ ರೂ.
1.	01(a)	ನಗದು ಪರಿಶೀಲನೆ	12642	0
2.	01(b)	ಖಾಯಂ ಮುಂಗಡ ಕುರಿತು	10000	0
3.	02	(a)ರಿಂದ (d) - ನಗದು ಪುಸ್ತಕಗಳ ನ್ಯೂನ್ಯತೆಗಳ ಕುರಿತು	0	0
4.	03	(a) ಪದನಾಮಾಂಕಿತ ಬ್ಯಾಂಕ್ ಖಾತೆ ಕುರಿತು	0	0
5.		(b) ಚಾಲ್ತಿ ಖಾತೆ ಕುರಿತು	0	0
6.	04	ಕ್ಷೇಮ ನಿಧಿಗೆ ಜಮೆ ಮಾಡಿರುವ ಮೊತ್ತವನ್ನು ಸರ್ಕಾರಕ್ಕೆ ಜಮೆ ಮಾಡುವ ಕುರಿತು	0	3865
7.	05	ಆರ್.ಟಿ.ಎ. ಮೊತ್ತವನ್ನು ಲೆಕ್ಕ ಶೀರ್ಷಿಕೆ 0070-60-118-0-01-000ಕ್ಕೆ ಜಮೆ ಮಾಡುವ ಬಗ್ಗೆ.	0	0
8.	06	ನಗದು ಶಾಖೆಯಲ್ಲಿ ಸಾಮಾನ್ಯ ರಶೀದಿ ಪುಸ್ತಕವನ್ನು ನಿರ್ವಹಿಸುವ ಬಗ್ಗೆ.	0	0
9.	07	ಕ್ಷೇಮ ನಿಧಿ ಕುರಿತು.	0	0
10.	08	ಬಿಡುಗಡೆಯಾದ ಅನುದಾನ, ವಿಚ್ಛಾದ ಅನುಧಾನ, ಉಳಿದ/ಅದ್ಯರ್ಜಿಸಲಾದ ಅನುದಾನ ವಿವರ.	0	0
11.	09	ಅಮಾನತ್ತಿನ ಅವಧಿ ಮತ್ತು ಗೈರು ಹಾಜರಾದ ಅವಧಿಯನ್ನು ವೇತನ ರಹಿತ ರಜೆ ಎಂದು ಪರಿಗಣಿಸಿದ್ದರೂ ಸಹ ವೇತನವನ್ನು ಡ್ರಾ ಮಾಡಿರುವ ಬಗ್ಗೆ	0	74524
12.	10	ಅಮಾನತ್ತಿನಲ್ಲಿದ್ದ ಪೊಲೀಸ್ ಸಿಬ್ಬಂದಿಗಳಿಗೆ ವೇತನದಲ್ಲಿ ಇತರೆ ಭತ್ಯೆಗಳನ್ನು ಪಾವತಿಸಿರುವ ಬಗ್ಗೆ.	0	71580
13.	11	ಮುರಬಡ್ತಿ ನೀಡಿದಾಗ ಸಿ.ಹೆಚ್.ಸಿ ಹುದ್ದೆಯಲ್ಲೂ ಸಹ ಪಿ.ಸಿ. ಹುದ್ದೆಯ ಕಷ್ಟಪರಿಹಾರ ಭತ್ಯೆಗಳನ್ನು ಪಾವತಿಸಿರುವ ಬಗ್ಗೆ.	0	21000
14.	12	ವೈದ್ಯಕೀಯ ವೆಚ್ಚ ಮರುಪಾವತಿ ವಿಷಯ ಕುರಿತು	88169	0
15.	13	ನಿಗದಿತ ವೆಚ್ಚಕ್ಕಿಂತ ಹೆಚ್ಚುವರಿಯಾಗಿ ಪಾವತಿಸಲಾಗಿರುವ ಸಿ.ಯು.ಜಿ ದೂರವಾಣಿ ಕರೆಗಳ ಮೊತ್ತ ವಸೂಲಾತಿ ಬಗ್ಗೆ.	0	12688
16.	14	ಉಪಯುಕ್ತಗೊಳಿಸಲಾದ ಪೀಠೋಪಕರಣ, ಎಲೆಕ್ಟ್ರಾನಿಕ್ಸ್ ವಸ್ತುಗಳು ಹಾಗೂ ಕಂಪ್ಯೂಟರ್ ಬಿಡಿಭಾಗಗಳ ವಿಲೇವಾರಿ ಕುರಿತು	0	0
17.	15	ಜರಾಕ್ಸ್ ಯಂತ್ರ ಹಾಗೂ ಜಿ.ಪಿ.ಎಸ್. ಸಾಧನ ಖರೀದಿ ಹಾಗೂ ಅಳವಡಿಕೆ ಕುರಿತು	1284400	0
18.	16	ವಿಶ್ವಾಧಿಕಾದ ಮೀರಿ ವಾಹನಗಳ ದುರಸ್ತಿಗೆ ವೆಚ್ಚಮಾಡಿರುವ ಬಗ್ಗೆ	703896	0
19.	17	(a) ಸ್ಥಳೀಯ ದಂಡದ ಮೊತ್ತವನ್ನು ಖಜಾನೆಯಿಂದ ಲೆಕ್ಕಸಮನ್ವಯ ಮಾಡುವ ಬಗ್ಗೆ	1625896825	0
20.		(b) ಪಿ.ಡಿ.ಎ. (Personal Digital Assistance)ಯಿಂದ ವಿಧಿಸಲಾದ ಸ್ಥಳೀಯದಂಡದ ವಿವರಪಟ್ಟಿ ವಹಿ ನಿರ್ವಹಿಸುವ ಕುರಿತು	0	0

21.	18	ಆಟೋಮೇಷನ್ ಸಂಬರ್‌ನಲ್ಲಿ ಸಂಗ್ರಹಿಸಲಾದ ಮೊತ್ತವನ್ನು ಲೆಕ್ಕಸಮನ್ವಯಗೊಳಿಸುವ ಬಗ್ಗೆ	15264020	
22.	19	ಸಂಚಾರ ನಿರ್ವಹಣಾ ಕೇಂದ್ರದ ಸ್ಥಿರ ಆಸ್ತಿ ತರಿಗೆ ಪಾವತಿಸುವ ಕುರಿತು.	1332353	0
23.	20	ಉಪ ವಿಭಾಗ ಹಾಗೂ ಸಂಚಾರ ಪೊಲೀಸ್ ಠಾಣಾ ಕಟ್ಟಡಗಳ ಬಾಡಿಗೆ ಪಾವತಿಸದೇ ಇರುವ ಬಗ್ಗೆ.	0	0
24.	21	ಸೇವಾ ಪುಸ್ತಕಗಳ ಬಗ್ಗೆ (a) ಕನ್ನಡ ಭಾಷಾ ಪರೀಕ್ಷೆ ವಿನಾಯಿತಿ ಕುರಿತು. (b) ತಿದುಪಾಲನಾ ರಜಾ ಮಂಜೂರಾತಿ ಮಾಡಿರುವ ಬಗ್ಗೆ. (c) ಸೇವಾ ಪುಸ್ತಕಗಳ ಪರಿಶೀಲನೆ ಬಗ್ಗೆ	0	0
25.	22	ಲಾಗ್‌ಬುಕ್‌ಗಳ ನಿರ್ವಹಣೆ ಕುರಿತು	0	0
26.	23	(a) ವಾಹನಗಳನ್ನು ನಿಯಮಾನುಸಾರ ಅನುಪಯುಕ್ತಗೊಳಿಸುವ ಕುರಿತು.	0	0
27.		(b) ವಾಹನಗಳ ನಿರುಪಯುಕ್ತ ಹಳೆಯ ಟೈಯರ್ ಮತ್ತು ಬಿಡಿಭಾಗಗಳ ವಿಲೇವಾರಿ ಕುರಿತು	0	0
28.		(c) Off road ಹಾಗೂ ಉಪಯೋಗಿಸದ ವಾಹನಗಳ ಕುರಿತ	0	0
29.	24	ಹಳೆಯ ದಿನಪತ್ರಿಕೆಗಳನ್ನು ವಿಲೇವಾರಿ ಮಾಡುವ ಬಗ್ಗೆ	0	0
30.	25	ಸಂಗಣಕ ಶಾಖೆಯ ಭೌತಿಕ ಪರಿಶೀಲನೆ ಕೈಗೊಳ್ಳುವ ಬಗ್ಗೆ	0	0
31.	26	ಪತಿ-ಪತ್ನಿ ಸರ್ಕಾರಿ ನೌಕರರಾಗಿದ್ದು ಒಂದೇ ಕೇಂದ್ರಸ್ಥಾನದಲ್ಲಿದ್ದು ಸರ್ಕಾರಿ ವಸತಿ ಗೃಹಗಳಲ್ಲಿ ವಾಸವಾಗಿರುವವರ ಬಗ್ಗೆ.	0	0
32.	27	ಜಿಪಿಕೆ ರಜೆ ನಗದೀಕರಣ ಬಿಲ್ಲಿನಲ್ಲಿ ಇತರೆ ಭತ್ಯೆಯನ್ನು ನೀಡಿರುವ ಬಗ್ಗೆ.	0	2425
33.	28	ಕೋವಿಡ್-19ನಿಂದಾಗಿ ಸರ್ಕಾರಿ ನೌಕರರು ನಿಧನ ಹೊಂದಿದ್ದು, ಅವರ ಕುಟುಂಬದವರಿಗೆ ರೂ.30.00 ಲಕ್ಷಗಳ ಪರಿಹಾರ ಮೊತ್ತವನ್ನು ಮಂಜೂರು ಮಾಡಿರುವ ಬಗ್ಗೆ.	12000000	0
34.	29	ಮಾಜಿ ಸೈನಿಕರುಗಳ ವೇತನ ಸಂರಕ್ಷಣೆಯನ್ನು ಕರ್ನಾಟಕ ನಿಯಮ 41-ಸಿ-ರನ್ವಯ ಮಾಡದೇ ಇರುವ ಬಗ್ಗೆ.	0	0
35.	30	ಲೆಕ್ಕ ಪರಿಶೋಧನಾ ವಿಚಾರಣಾ ಟಿಪ್ಪಣಿಗಳಿಗೆ ಮಾಹಿತಿ ಒದಗಿಸದೇ ಇರುವ ಬಗ್ಗೆ. (a) ಬಿ.ಸಿ.ಸಿ.ಟಿ. ಸಂಬಂಧ ಡಾಖಲೆಗಳನ್ನು ಒದಗಿಸದೇ ಇರುವ ಬಗ್ಗೆ (b) ವಾರಸುದಾರಿಲ್ಲದ ವಾಹನಗಳನ್ನು ಸಾರ್ವಜನಿಕ ಬಹಿರಂಗ ಹರಾಜು ಮಾಡಿದೆ ಬಗ್ಗೆ	0	0
		ಒಟ್ಟು ರೂ.	165,65,97,305/-	1,86,082/-

ಡಿ. ರೂಪಾ
ಐಪಿಎಸ್
ಜಂಟಿ ನಿಯಂತ್ರಕರು (ಹಣಕಾಸು)
ಆಡಳಿತ ಸುಧಾರಣೆ ಮತ್ತು ಮೊಲೀಸ್
ಮಹಾನಿರೀಕ್ಷಕರು ಮತ್ತು ಮಹಾನಿರೀಕ್ಷಕಿಯರ್ಯವರ ಪರವಾಗಿ.

ಠಾಣೆಗಳಲ್ಲಿ ಪೀಠೋಪಕರಣಗಳು, ಎಲೆಕ್ಟ್ರಾನಿಕ್ಸ್ ವಸ್ತುಗಳು (ವಾಕಿಟಾಕಿ ಜೊತೆಗೆ ಬ್ಯಾಟರಿ, ಸ್ಟಿಲ್ ಕ್ಯಾಮೆರಾ, ಹ್ಯಾಂಡಿಕ್ಯಾಮ್, ವಿಡಿಯೋ ಕ್ಯಾಮೆರಾ, ಬ್ಲಾಬೆರಿ, ಬ್ಲಾಬೆರಿ ಪ್ರಿಂಟರ್ಸ್, Palmlec Alcometer, ಡಿಡಿ ಉಪಕರಣ & ಪ್ರಿಂಟರ್, ಸ್ಕ್ಯಾನರ್), ಜೆರಾಕ್ಸ್ ಯಂತ್ರ ಹಾಗೂ ಗಣಕಯಂತ್ರ & ಪರಿಕರಗಳನ್ನು Buy-back / Exchange Offer ಅಥವಾ ವಿಲೇವಾರಿ ಮಾಡಲು ಸೂಕ್ತ ಕ್ರಮ ತೆಗೆದುಗೊಳ್ಳುವುದು ಹಾಗೂ ಕೈಗೊಂಡ ಕ್ರಮಗಳ ಬಗ್ಗೆ ದೃಢೀಕೃತ ದಾಖಲೆಗಳೊಂದಿಗೆ ಪಾಲನಾ ವರದಿ ಸಲ್ಲಿಸುವುದು.

ಕಂಡಿಕೆ 15 –ಜೆರಾಕ್ಸ್ ಯಂತ್ರ ಹಾಗೂ ಜಿ.ಪಿ.ಎಸ್. ಸಾಧನ ಖರೀದಿ ಹಾಗೂ ಅಳವಡಿಕೆ ಕುರಿತು.

ಘಟಕದ ವಾಹನ ವಿಭಾಗದ ದ್ವಿಚಕ್ರ ವಾಹನಗಳಿಗೆ ಜಿ.ಪಿ.ಎಸ್. ಸಾಧನ ಖರೀದಿಸಿ, ಅಳವಡಿಸಿದ್ದು, ಈ ವೆಚ್ಚವನ್ನು ಲೆಕ್ಕ ಶೀರ್ಷಿಕೆ 2055–00–108–0–01–195–ಸಾರಿಗೆ ವೆಚ್ಚದಡಿ ಭರಿಸಲಾಗಿದೆ ಹಾಗೂ ಘಟಕದ ಸಂಚಾರ ಪೊಲೀಸ್ ಠಾಣೆಗಳ ಉಪಯೋಗಕ್ಕಾಗಿಜೆರಾಕ್ಸ್ ಯಂತ್ರಗಳನ್ನು ಖರೀದಿಸಿ, ವೆಚ್ಚವನ್ನು 051–ಸಾಮಾನ್ಯ ವೆಚ್ಚಗಳ ಲೆಕ್ಕ ಶೀರ್ಷಿಕೆಯಡಿ ಭರಿಸಿರುವುದು ಲೆಕ್ಕ ಪರಿಶೋಧನಾ ಸಮಯದಲ್ಲಿ ಕಂಡು ಬಂದಿರುತ್ತದೆ. ಖರೀದಿ ವಿವರವನ್ನು ಈ ಕೆಳಗೆ ನಮೂದಿಸಲಾಗಿದೆ.

ಕ್ರ ಸಂ.	ವೋಚರ್ಸ್	ದಿನಾಂಕ	ಸರಕು ಮತ್ತು ಸಾಮಾಗ್ರಿಗಳ ವಿವರ	ಮೊತ್ತ ರೂ.	ಒಟ್ಟು ಮೊತ್ತ ರೂ.
Bill No.: AD1904017131			Token No: 1901341522- Date: 04.07.2019		
1.	INV/18-19/D-113	03.05.2019	Installlation of GPS Device for 2 Wheeler vehicles.	95000	304000
2.	INV/18-19/D-114	04.05.2019		95000	
3.	INV/18-19/D-115	06.05.2019		95000	
4.	INV/18-19/D-117	07.05.2019		19000	
Bill No.: AD1905067083			Token No: 1901521739- Date:21.08.2019		30400
5.	INV/18-19/D-117	20.06.2019	Installlation of GPS Device for 2 Wheeler vehicles.	30400	
				Total Rs.	3,34,400/-
Bill No.: AD2112176337			Token No: 2103081419- Date: 08.03.2022		9,50,000/-
6.	2326	05.03.2022	02 ಸಂಖ್ಯೆಯ ಜೆರಾಕ್ಸ್ ಯಂತ್ರಗಳ ಖರೀದಿ	380000	
Bill No.: AD2112153163			Token No: 2103081364- Date: 07.03.2022		
7.	2327	04.03.2022	02 ಸಂಖ್ಯೆಯ ಜೆರಾಕ್ಸ್ ಯಂತ್ರಗಳ ಖರೀದಿ	380000	
Bill No.: AD2112323654			Token No: 2103234735- Date: 16.03.2022		
8.	2328	11.03.2022	01 ಸಂಖ್ಯೆಯ ಜೆರಾಕ್ಸ್ ಯಂತ್ರಗಳ ಖರೀದಿ	190000	
				Grand total Rs.	12,84,400/-

ಮೇಲಿನ ಕ್ರಮ ಸಂಖ್ಯೆ: 01 ರಿಂದ 08 ರವರೆಗಿನ ಖರೀದಿಗೆ ಸಂಬಂಧಿಸಿದ ಕಡತ ಹಾಗೂ ಡಿ.ಸಿ. ಬಿಲ್ಲುಗಳನ್ನು ಪರಿಶೀಲಿಸಲಾಗಿ, ಈ ಕೆಳಗಿನಂತೆ ಸರ್ಕಾರಿ ಆದೇಶ ಹಾಗೂ ನಿಯಮಗಳನ್ನು ಉಲ್ಲಂಘಿಸಿರುವುದು ಕಂಡು ಬಂದಿರುತ್ತದೆ.

(a) ಘಟಕಕ್ಕೆ ಯಾವ ಯಾವ ಸರಕು ಮತ್ತು ಸಾಮಗ್ರಿಗಳು ಅವಶ್ಯವಿದೆಯೋ ಅವುಗಳ ಖರೀದಿಗೆ ಕ್ರಿಯಾ ಯೋಜನೆ ತಯಾರಿಸಿ, ನಿಯಮಾನುಸಾರ ಖರೀದಿಸಬೇಕಾಗಿರುತ್ತದೆ. ಆದರೆ ಮೇಲೆ ನಮೂದಿಸಲಾದ ಜಿ.ಪಿ.ಎಸ್. ಸಾಧನವನ್ನು ಎರಡು ಹಂತಗಳಲ್ಲಿ ಖರೀದಿಸಿ, ಅಳವಡಿಸಿರುವುದು ಕಂಡು ಬಂದಿರುತ್ತದೆ. ಮೇಲಿನ ಕ್ರಮ ಸಂಖ್ಯೆ: 01 ರಿಂದ 05ರವರೆಗಿನ ಖರೀದಿಗೆ ಸಂಬಂಧಿಸಿದಂತೆ, ಟೆಂಡರ್ ಪ್ರಕ್ರಿಯೆಗಳಡಿಯಲ್ಲಿ ವ್ಯವಹರಿಸದೆ ದರಪಟ್ಟಿಗಳ ಮೂಲಕ ವ್ಯವಹರಿಸಿ, ಖರೀದಿಗೆ ತಗಲುವ ಮೊತ್ತವು ರೂ.1.00 ಲಕ್ಷಕ್ಕಿಂತಲೂ ಹೆಚ್ಚಿನ ಪ್ರಮಾಣದಲ್ಲಿದ್ದರೆ, ಕೆ.ಟಿ.ಪಿ.ಪಿ. ಕಾಯ್ದೆ 1999 ಮತ್ತು ನಿಯಮ 2000 ನಿಯಮಗಳಡಿಯಲ್ಲಿ ಟೆಂಡರ್ ಪ್ರಕ್ರಿಯೆಗಳ ಮೂಲಕ ಖರೀದಿ ಮಾಡಬೇಕಾಗಿತ್ತು. ಆದರೆ ಸ್ಪರ್ಧಾತ್ಮಕ ದರಪಟ್ಟಿಗಳ ಮೂಲಕ ಬೇರೆ ಬೇರೆ ಆದೇಶ ಮತ್ತು ದಿನಾಂಕಗಳಲ್ಲಿ ಖರೀದಿಸಲಾಗಿದೆ. ಈ ರೀತಿಯ ಖರೀದಿ ಪ್ರಕ್ರಿಯೆಯು ಕೆ.ಟಿ.ಪಿ.ಪಿ. ಕಾಯ್ದೆ 1999 ಮತ್ತು ನಿಯಮ 2000 ನಿಯಮಗಳನ್ನು ಉಲ್ಲಂಘಿಸಿದಂತಾಗಿದೆ.

(11)

ಸಂಖ್ಯೆ: ಲೆಪದ-10/151/2022-23

ಡೈರೆಕ್ಟರ್ ಜನರಲ್ ಮತ್ತು ಇನ್ಸ್‌ಪೆಕ್ಟರ್
ಜನರಲ್‌ಆಫ್ ಪೊಲೀಸ್‌ರವರ ಕಛೇರಿ,
ಕರ್ನಾಟಕ ರಾಜ್ಯ, ಬೆಂಗಳೂರು.
ದಿನಾಂಕ: 12.04.2023.

ಇವರಿಗೆ,

ಉಪ ಪೊಲೀಸ್ ಆಯುಕ್ತರು,
ಸಿ.ಎ.ಆರ್.(ಪಶ್ಚಿಮ),
ಬೆಂಗಳೂರು ನಗರ.

ಮಾನ್ಯರೆ,

ವಿಷಯ:– ಉಪ ಪೊಲೀಸ್ ಆಯುಕ್ತರು, ಸಿ.ಎ.ಆರ್.(ಪಶ್ಚಿಮ), ಬೆಂಗಳೂರು ನಗರ ರವರ ಘಟಕದ 2017–18 ರಿಂದ 2021–22ನೇ ಸಾಲಿನವರೆಗಿನ (05 ವರ್ಷ) ಅವಧಿಗೆ ಲೆಕ್ಕಪರಿಶೋಧನಾ ವರದಿ ಬಗ್ಗೆ.

ಉಲ್ಲೇಖ:– ಪೊಲೀಸ್ ಪ್ರಧಾನ ಕಛೇರಿಯ ಜ್ಞಾಪನ ಪತ್ರ ಸಂಖ್ಯೆ: ಲೆಪದ–1/01/2022–23, ದಿನಾಂಕ: 13.04.2022 ಮತ್ತು 12.10.2022

* * *

ಪ್ರಧಾನ ಕಛೇರಿ ಲೆಕ್ಕ ಪರಿಶೋಧಕರು ತಮ್ಮ ಘಟಕದ 2017–18 ಮತ್ತು 2021–22ನೇ ಸಾಲಿನ ಲೆಕ್ಕ ಪರಿಶೋಧನೆಯನ್ನು ಕೈಗೊಂಡಿದ್ದು, ತತ್ಸಂಬಂಧದ ಲೆಕ್ಕ ಪರಿಶೋಧನಾ ವರದಿಯನ್ನು ಇದರೊಂದಿಗೆ ಲಗತ್ತಿಸಿ ಕಳುಹಿಸಿದೆ.

2017–18 ಮತ್ತು 2021–22ನೇ ಸಾಲಿನ ಲೆಕ್ಕ ಪರಿಶೋಧನಾ ವರದಿಯಲ್ಲಿ ತಿಳಿಸಿರುವಂತೆ ಸೂಕ್ತ ಕ್ರಮ ಕೈಗೊಂಡು ಪಾಲನಾ ವರದಿಯನ್ನು 30 ದಿವಸಗಳೊಳಗಾಗಿ ಈ ಕಛೇರಿಗೆ ಕಳುಹಿಸಿಕೊಡಲು ಕೋರಲಾಗಿದೆ.

ತಮ್ಮ ನಂಬುಗೆಯ,

12/4/23

(ಎಸ್. ರೇವಣ್ಣ)
ಜಂಟಿ ನಿಯಂತ್ರಕರು, (ಹಣಕಾಸು),
ಮಹಾನಿರ್ದೇಶಕರು ಮತ್ತು ಪೊಲೀಸ್
ಮಹಾ ನಿರೀಕ್ಷಕರುರವರ ಪರವಾಗಿ.

ಪ್ರತಿಯನ್ನು:–

ಪೊಲೀಸ್ ಆಯುಕ್ತರು, ಬೆಂಗಳೂರು ನಗರ ರವರಿಗೆ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.

ರವಾನಿಸಲಾಗಿದೆ
12 APR 2023
1
ಸಹಿ:.....

ಉಪ ಪೊಲೀಸ್ ಆಯುಕ್ತರು, ಪಿ.ಎ.ಆರ್.(ಪಶ್ಚಿಮ), ಬೆಂಗಳೂರು ನಗರ ರವರ ಘಟಕದ ದಿನಾಂಕ: 01.04.2017 ರಿಂದ 31.03.2022ರ (05 ಆರ್ಥಿಕ ವರ್ಷ) ಅವಧಿಗೆ ಸಂಬಂಧಿಸಿದ ಲೆಕ್ಕ ಪರಿಶೋಧನಾ ವರದಿಯಲ್ಲಿ ಆಕ್ಷೇಪಣೆಯಲ್ಲಿಡಲಾದ ಮತ್ತು ವಸೂಲಾತಿಗೆ ಸೂಚಿಸಿರುವ ವಿವರಣಾ ಪಟ್ಟಿ

ಕಂಡಿಕೆ ಸಂಖ್ಯೆ	ವಿವರಗಳು	ಆಕ್ಷೇಪಣೆಯಲ್ಲಿಡಲಾದ ಮೊತ್ತ ರೂ.	ವಸೂಲಾತಿಗೆ ಸೂಚಿಸಲಾದ ಮೊತ್ತ ರೂ.
01(a)	ನಗದು ಪರಿಶೀಲನೆ.	-	-
01(b)		175000	-
02(a)	ಘದನಾಮಾಂಕಿತ ಉಳಿತಾಯ ಖಾತೆ ಕುರಿತು.	4256083	-
02(b)	ಉಳಿತಾಯ ಖಾತೆಗೆ ಬಂದ ಬಡ್ಡಿ ಹಣದ ವಿವರ	1063573	-
03	ನಗದು ಪುಸ್ತಕದಲ್ಲಿನ ನ್ಯೂನ್ಯತೆ ಕುರಿತು (a) ನಗದು ಪುಸ್ತಕದಲ್ಲಿ ದೈನಂದಿನ ಆರ್ಥಿಕ ವಹಿವಾಟನ್ನು ದಾಖಲ್ಮಡದೇ ಇರುವ ಬಗ್ಗೆ	97448206	-
	(b) ನಗದು ಪುಸ್ತಕದಲ್ಲಿ ನಮೂದನ್ನು ತಿದ್ದಿ, ತಿದ್ದುಪಡಿಗೆ ಚಿಕ್ಕ ರುಜು ಹಾಕದೇ ಇರುವ ಬಗ್ಗೆ	-	-
04	ರೆಮಿಟಿನ್ಸ್ ವಹಿ ನಿರ್ವಹಣೆ ಕುರಿತು.	121075388	-
05	ಘಡ್ರತಾ ತೇವಣಿಯನ್ನು ನಿರ್ವಹಿಸದೇ ಇರುವ ಬಗ್ಗೆ.	2000	-
06	ಕ್ಷೇಮ ನಿಧಿ ಕುರಿತು.	-	-
07	ಅಂತಿಮ ವೇತನ ಪ್ರಮಾಣ ಪತ್ರ ಬಗ್ಗೆ.	-	71900
08	ಗಳಿಕೆ ರಜೆ ನಗದೀಕರಣ ಮಂಜೂರಾತಿಯಲ್ಲಿ ವಿಶೇಷ ಭತ್ಯೆ ಸೇರಿಸಿ ಮಂಜೂರು ಮಾಡಿರುವ ಬಗ್ಗೆ.	-	13032
09	ಅಮಾನತ್ತಿನಲ್ಲಿರುವವರಿಗೆ ವೇತನದಲ್ಲಿ ಇತರೆ ಭತ್ಯೆಗಳನ್ನು ನೀಡಿರುವ ಬಗ್ಗೆ.	-	100020
10	ಮರಣ ಹೊಂದಿದ ಅಧಿಕಾರಿ/ಸಿಬ್ಬಂದಿಗಳಿಗೆ ಮರಣ ಹೊಂದಿದ ದಿನಾಂಕದಿಂದಲೂ ವೇತನ ಹಾಗೂ ಇತರೆ ಭತ್ಯೆಗಳನ್ನು ನೀಡಿರುವ ಬಗ್ಗೆ.	-	202235
11	(a) ಮುಂಬಡ್ತಿ ನೀಡಿದಾಗ ಸಿ.ಹೆಚ್.ಸಿ ಹುದ್ದೆಯಲ್ಲೂ ಸಹ ಪಿ.ಸಿ ಹುದ್ದೆಯ ಕಷ್ಟಪರಿಹಾರ ಭತ್ಯೆಯನ್ನು ಪಾವತಿಸಿರುವ ಬಗ್ಗೆ.	-	67000
	(b) ಸರ್ಕಾರಿ ಆದೇಶವನ್ನು ಉಲ್ಲಂಘಿಸಿ ಹೆಚ್ಚುವರಿಯಾಗಿ ಕಷ್ಟ ಪರಿಹಾರ ಭತ್ಯೆಗಳನ್ನು ಪಾವತಿಸಿರುವ ಬಗ್ಗೆ –	-	353000
12	ಅಧಿಕಾರಿ/ಸಿಬ್ಬಂದಿಗಳಿಗೆ 15/30 ದಿನಗಳ ಪತ್ರಾಂಕಿತ ರಜಾ ವೇತನವನ್ನು ಏಯವ್ಯಗಳಿಗೆ ವಿರುದ್ಧವಾಗಿ ಮಂಜೂರು ಮಾಡಿ ಪಾವತಿಸಿರುವ ಬಗ್ಗೆ.	-	42715
13	ಬುನಾದಿ ತರಬೇತಿ ಅವಧಿಯಲ್ಲಿ ಪ್ರೊಬೇಷನರಿ ಆರ್.ಎಸ್.ಐ ಹಾಗೂ ಪೊಲೀಸ್ ಕಾನ್ಸ್‌ಟೇಬಲ್‌ರವರುಗಳಿಗೆ ಪತ್ರಾಂಕಿತ ರಜಾ ವೇತನ ಪಾವತಿಸಿರುವ ಕುರಿತು.	-	1282477
14	(a) ವಸತಿಗೃಹಪಂಚಿಕೆಯಾದ ನಂತರ ಹಂಚಿಕೆಯಾದ ಪೊಲೀಸ್ ಸಿಬ್ಬಂದಿಗಳು ಮನೆಯನ್ನು ಪಶಕ್ಕೆ ಪಡದ ದಿನಾಂಕದಿಂದ ಮನೆ ದಾಡಿಗೆ ಭತ್ಯೆಯನ್ನು ವೇತನದಲ್ಲಿ ಕಟಾವಣಿಗೊಳಿಸದೇ ಇರುವ ಬಗ್ಗೆ.	-	919920
	(b) ವಸತಿಗೃಹಗಳ ಪಂಚಿಕ ವಹಿಯನ್ನು ಘಟಕದಲ್ಲಿ ನಿರ್ವಹಿಸದೇ ಇರುವ ಬಗ್ಗೆ.	-	-

20.	15	ವೈದ್ಯಕೀಯ ವೆಚ್ಚ ಮರುಪಾವತಿ ವಿಷಯ ಕುರಿತು	354626	-
21.	16	(a) ಎರವಲು ಸೇವಾ ವೆಚ್ಚ (Lent Establishment Charges) ಕುರಿತು.	-	196748
22.		(b) ಎರವಲು ಸೇವಾ ವೆಚ್ಚವನ್ನು ಸರ್ಕಾರಿ ಆದೇಶದಲ್ಲಿನ ಸೂತ್ರದಂತೆ ವಸೂಲಿ ಮಾಡುವ ಕುರಿತು.	-	-
23.		(c) Lent Establishment Register ನಿರ್ವಹಿಸದೇ ಇರುವ ಬಗ್ಗೆ	-	-
24.		(d) ಎರವಲು ಸೇವಾ ವೆಚ್ಚಗಳ ಮಾಹಿತಿ ಬಗ್ಗೆ	-	-
25.	17	ವಾರದ ಭತ್ಯೆಯನ್ನು ಹೆಚ್ಚುವರಿಯಾಗಿ ಮಂಜೂರಿಸಿ ಪಾವತಿಸಿರುವ ಬಗ್ಗೆ.	-	50200
26.	18	ಮಾಜಿ ಸೈನಿಕರುಗಳ ವೇತನ ಸಂರಕ್ಷಣೆಯನ್ನು ಕ.ನಾ.ಸೇ.ನಿ. ನಿಮಯ 41-ಸಿ-ರನ್ವಯ ಮಾಡದೇ ಇರುವ ಬಗ್ಗೆ.	-	-
27.	19	(a) ಸಂಗ್ರಹ ಶಾಖೆಯ ಭೌತಿಕ ಪರಿಶೀಲನೆ ಕೈಗೊಳ್ಳುವ ಬಗ್ಗೆ.	-	-
28.		(b) ಖರೀದಿಸಲಾದ ಸರಕು/ಸಾಮಗ್ರಿಗಳನ್ನು ದಾಸ್ತಾನು ವಹಿಗೆ ತೆಗೆದುಕೊಳ್ಳದೇ ಇರುವ ಬಗ್ಗೆ	-	-
29.	20	(a) ಸರಕು/ಸಾಮಗ್ರಿಗಳ ಖರೀದಿಯಲ್ಲಿ ಕೆ.ಟಿ.ಪಿ.ಪಿ. ಅಧಿನಿಯಮಗಳ ಉಲ್ಲಂಘನೆ ಕುರಿತು.	757310	-
30.		(b) ದರಪಟ್ಟಿ ಪಡೆಯದೇ ನೇರವಾಗಿ ಖರೀಸಿರುವ ಬಗ್ಗೆ.	81608	-
31.		(c) ಸಾದಿಲ್ವಾರು ವೆಚ್ಚಗಳ ವಹಿ (Detailed Contingent Bills Register) ನಿರ್ವಹಿಸದೇ ಇರುವ ಕುರಿತು	-	-
32.		(d) ಆದೇಶ ಪುಸ್ತಕ (Order Book) ನಿರ್ವಹಿಸುವ ಬಗ್ಗೆ	-	-
33.	21	ಸರ್ಕಾರಿ ವಾಹನಗಳಿಗೆ ಬಾರ್‌ಲೈಟ್ ಖರೀದಿ ಹಾಗೂ ಅಳವಡಿಕೆ ಬಗ್ಗೆ.	86498	-
34.	22	ಕೋವಿಡ್-19 ವೈರಾಣು ಹರಡುವಿಕೆ ತಡೆಯಲು ರಕ್ಷಣಾ ಸಾಮಗ್ರಿ ಖರೀದಿ ಕುರಿತು	397941	-
35.	23	(a) ಬಿಡುಗಡೆಯಾದ ಅನುದಾನ, ಖರ್ಚಾದ ಅನುದಾನ, ಉಳಿದ/ಅದ್ಯರ್ಪಿಸಲಾದ ಅನುದಾನ ವಿವರ	-	-
36.		(b) ಒದಗಿಸಲಾದ ಅನುದಾನ ವಿವರ ಕುರಿತು	21121826	-
37.		(c) ಉಪ ಲೆಕ್ಕ ಶೀರ್ಷಿಕೆ 221-ಸಾಮಗ್ರಿ ಮತ್ತು ಸರಬರಾಜು ವೆಚ್ಚ ಅನುದಾನ ಕುರಿತು.	145000	-
38.		(d) ಬಿಡುಗಡೆಯಾದ ಅನುದಾನದಲ್ಲಿ ವೆಚ್ಚಗೊಳಿಸಲಾದ ಮೊತ್ತಗಳಿಗೆ ಡಿ.ಸಿ.ಬಿಲ್ಲುಗಳನ್ನು ಒದಗಿಸದೇ ಇರುವ ಬಗ್ಗೆ.	1764504	-
39.	24	ಗಳಿಕೆ ರಜೆ ನಗದೀಕರಣ ಬಿಲ್ಲಿನಲ್ಲಿ ಇತರೆ ಭತ್ಯೆಯನ್ನು ಮಂಜೂರು ಮಾಡಿರುವ ಬಗ್ಗೆ.	-	310
40.	25	ಹಳೆಯ ದಿನಪತ್ರಿಕೆಗಳನ್ನು ವಿಲೇವಾರಿ ಮಾಡುವ ಬಗ್ಗೆ.	-	-
41.	26	(a) ಹಳೆಯ ಟೈರುಗಳು ಮತ್ತು ಸುಟ್ಟ ಆಯಿಲ್‌ನ್ನು ವಿಲೇವಾರಿ ಮಾಡುವ ಬಗ್ಗೆ.	-	-
42.		(b) ಅನುಪಯುಕ್ತ ಬಿಡಿಭಾಗಗಳು ಹಾಗೂ ಹಳೆಯ ಟೈರ್&ಟ್ಯೂಬ್‌ಗಳ ವಿಲೇವಾರಿ ಕುರಿತು	-	-

	27 (a & b)	ನಿರುಪಯುಕ್ತ ವಾಹನಗಳನ್ನು ವಿಲೇವಾರಿಗೊಳಿಸುವ ಬಗ್ಗೆ.	-	-
4.	28	ಸೇವಾ ಪುಸ್ತಕಗಳ ಕುರಿತು.	-	-
5.	29	ವೇತನ ಶ್ರೇಣಿಗೆ ಅನುಗುಣವಾಗಿ ಕೆ.ಜಿ.ಐ.ಡಿ ವಂತಿಕೆ ಕಟಾವು ಮಾಡಿಸದೇ ಇರುವ ಬಗ್ಗೆ.	-	-
6.	30	ಘಟಕದ ವಿವಿಧ ಕಂಪನಿಗಳಲ್ಲಿ ನಿರ್ವಹಿಸಬೇಕಾದ ವಹಿಗಳ ಕುರಿತು.	-	-
7.	31	ಜಿ.ಎಸ್.ಟಿ. ಸಂಬಂಧ ದಾಖಲೆಗಳನ್ನು ಒದಗಿಸದೇ ಇರುವ ಬಗ್ಗೆ.	-	-
		ಒಟ್ಟು ಮೊತ್ತ ರೂ.	24,87,29,563/-	2,23,90,491/-

12/4/23

(ಎಸ್. ರೇವಣ್ಣ),
ಜಂಟಿ ನಿಯಂತ್ರಕರು, (ಹಣಕಾಸು),
ಮಹಾನಿರ್ದೇಶಕರು ಮತ್ತು ಪೊಲೀಸ್
ಮಹಾ ನಿರೀಕ್ಷಕರುರವರ ಪರವಾಗಿ.

12/4/23

ಕಂಡಿಕೆ 19 – ಸಂಗ್ರಹ ಶಾಖೆಯ ಭೌತಿಕ ಪರಿಶೀಲನೆ ಕೈಗೊಳ್ಳುವ ಬಗ್ಗೆ.

(a) ಘಟಕ ಸಂಗ್ರಹ ಶಾಖೆಯ ಕೆಎಫ್ಸಿ ನಿಯಮ 169ರ ಪ್ರಕಾರ ಭೌತಿಕ ಪರಿಶೀಲನೆ ದಿನಾಂಕ:01-04-2017 ರಿಂದ 31-03-2022ರವರೆಗೆ ಸಂಗ್ರಹ ಶಾಖೆಯ ಭೌತಿಕ ಪರಿಶೀಲನೆ ಕೈಗೊಳ್ಳದಿರುವುದು ಲೆಕ್ಕ ಪರಿಶೋಧನಾ ಸಮಯದಲ್ಲಿ ಕಂಡು ಬಂದಿದೆ.

ಆದ್ದರಿಂದ ಕೆ.ಎಫ್.ಸಿ. ನಿಯಮ 169ರಲ್ಲಿ ತಿಳಿಸಿರುವಂತೆ ಪೀಠೋಪಕರಣ ಮತ್ತು ಕಛೇರಿಯ ಸಾಮಾನುಗಳ ಸಂದರ್ಭದಲ್ಲಿ ಸರಕನ್ನು ವರ್ಷದಲ್ಲಿ ತೀರ ಕಡಿಮೆ ಒಮ್ಮೆಯಾದರೂ (ಏಪ್ರಿಲ್‌ನಲ್ಲಿ) ಕಛೇರಿಯ ಮುಖ್ಯಾಧಿಕಾರಿ ಅಥವಾ ಅವನ ಗೆಜೆಟೆಡ್ ಸಹಾಯಕರಲ್ಲಿ ಒಬ್ಬನು ಸತ್ಯಾಪನೆ ಮಾಡಬೇಕೆಂದು ತಿಳಿಸಲಾಗಿದೆ. ಅದರಂತೆ 2017-18 ರಿಂದ 2021-22ನೇ ಸಾಲಿನ ಕೆ.ಎಫ್.ಸಿ. ಮತ್ತು ಎಂ.ಸಿ.ಇ. ರನ್ನಯ ಭೌತಿಕ ಪರಿಶೀಲನೆ ಕೈಗೊಂಡು, ದೃಢೀಕೃತ ದಾಖಲೆಗಳೊಂದಿಗೆ ಪಾಲನಾ ವರದಿಯನ್ನು ಸಲ್ಲಿಸುವುದು.

(b) ಖರೀದಿಸಲಾದ ಸರಕು/ಸಾಮಗ್ರಿಗಳನ್ನು ದಾಸ್ತಾನು ವಹಿಗೆ ತೆಗೆದುಕೊಳ್ಳದೇ ಇರುವ ಬಗ್ಗೆ – ಘಟಕದ ಆದೇಶ ಸಂಖ್ಯೆ: ಸಂಗ್ರಹ/06/2019-20, ದಿನಾಂಕ: 27.05.2019ರಲ್ಲಿ 2019-20ನೇ ಸಾಲಿನ ಸಾರ್ವತ್ರಿಕ ಚುನಾವಣೆ ಸಂಬಂಧ ಅವಶ್ಯವಾದ ಪೀಠೋಪಕರಣ ಹಾಗೂ ಇತರೆ ಸಾಮಗ್ರಿಗಳನ್ನು M/s. District Supply and Marketing Co-Opreative Society Ltd., ಹಡ್ಸನ್ ವೃತ್ತ, ಬೆಂಗಳೂರು ರವರಿಂದ ಖರೀದಿಸಿದ್ದು, ಖರೀದಿಸಲಾದ ಪೀಠೋಪಕರಣ ಹಾಗೂ ಇತರೆ ಸಾಮಗ್ರಿಗಳನ್ನು ಘಟಕದ ದಾಸ್ತಾನು ವಹಿ ತೆಗೆದುಕೊಂಡು ಯಾರಿಗೆ ವಿತರಣೆ ಮಾಡಲಾಗಿದೆ ಎಂಬ ವಿವರಗಳನ್ನು ನಮೂದಿಸದೇ ಇರುವುದು ಕಂಡು ಬಂದಿರುತ್ತದೆ. ಕೆ.ಎಫ್.ಸಿ. ಅನುಚ್ಛೇದ 166ರಲ್ಲಿ ಕಛೇರಿಯ ಪೀಠೋಪಕರಣ ಮತ್ತು ಇತರೆ ದಾಸ್ತಾನು ವಸ್ತುಗಳನ್ನು ಪ್ರಪತ್ರ 34-ಎ ರಲ್ಲಿ ನಿರ್ವಹಿಸಬೇಕು. ವರ್ಗ ಪುಸ್ತಕದ ಪತ್ವತ್ರವು ಸ್ವೀಕೃತಿ, ರವಾನೆ (ಹಾನಿ, ನಾಶ, ಸ್ಥಳಾಂತರ ಅಥವಾ ವಿಕಿರಯ ಇವುಗಳಿಂದಾಗಿ) ಮತ್ತು ಬಾಕಿ ಇರುವುಗಳನ್ನು ನಮೂದಿಸುವುದಕ್ಕೆ ಎಡೆಮಾಡಿ ಕೊಡುತ್ತದೆ. ಖರೀದಿ ಮತ್ತು ವಿಲೇ ಮಾಡಿದ ವಸ್ತುಗಳನ್ನು ಕೂಡಲೇ ಲೆಕ್ಕಕ್ಕೆ ತರಬೇಕು. ತ್ರೈಮಾಸಿಕಕ್ಕೊಮ್ಮೆ ಈ ರಿಜಿಸ್ಟರುಗಳನ್ನು ಸತ್ಯಾಪಿಸಬೇಕು.

ಆದ್ದರಿಂದ ಖರೀದಿಸಲಾದ ಪೀಠೋಪಕರಣ ಹಾಗೂ ಇತರೆ ಸಾಮಗ್ರಿಗಳನ್ನು ನಿಗದಿತ ನಮೂನೆಯಲ್ಲಿ (Form 34-A) ಹಾಗೂ ಅನುಪಯುಕ್ತಗೊಳಿಸಿದ ಸರಕು/ಸಾಮಗ್ರಿಗಳನ್ನು Dead Strock Register ನಲ್ಲಿ ನಿರ್ವಹಿಸುವುದು. ಈ ಕುರಿತು ತೆಗೆದುಕೊಂಡ ಕ್ರಮಗಳ ಬಗ್ಗೆ ದೃಢೀಕೃತ ದಾಖಲೆಗಳೊಂದಿಗೆ ಪಾಲನಾ ವರದಿ ಸಲ್ಲಿಸುವುದು.

ಕಂಡಿಕೆ 20 – ಸರಕು/ಸಾಮಗ್ರಿಗಳ ಖರೀದಿಯಲ್ಲಿ ಕೆ.ಟಿ.ಪಿ.ಪಿ. ಅಧಿನಿಯಮಗಳ ಉಲ್ಲಂಘನೆ ಕುರಿತು.

(a) 2019-20ನೇ ಸಾಲಿನಲ್ಲಿ ಘಟಕಕ್ಕೆ ಅವಶ್ಯವಿರುವ ಟೆಂಟ್, ಅಲ್ಯೂಮಿನಿಯಂ ಲ್ಯಾಡರ್, ಶಾಮಿಯಾಕ್ಕೆ ಬೇಕಾದ ಫ್ರೇಮ್‌ಗಳು ಮತ್ತು ಪೈಪ್‌ಗಳನ್ನು M/s. District Supply and Marketing Co-Opreative Society Ltd., ಹಡ್ಸನ್ ವೃತ್ತ, ಬೆಂಗಳೂರು ರವರಿಂದ ನೇರವಾಗಿ ಬೇರೆ ಬೇರೆ ಆದೇಶ ಮತ್ತು ದಿನಾಂಕಗಳಂದು ಖರೀದಿಸಿರುವುದು ಲೆಕ್ಕ ಪರಿಶೋಧನಾ ಸಮಯದಲ್ಲಿ ಕಂಡು ಬಂದಿರುತ್ತದೆ.

